## ಅಧ್ಯಾಯ – ೧೧

# ಇತರ ಇಲಾಖೆಗಳು

ಪರಂಪರಾನುಗತವಾಗಿ ಬಂದ ರಾಜ್ಯಾಡಳಿತ ವ್ಯವಸ್ಥೆಯು ವಿಜಯನಗರದ ಅರಸರು ಹಾಗೂ ಆನಂತರದ ಪಾಳೇಗಾರರ ಆಳ್ವಿಕೆಯ ಕಾಲದವರೆವಿಗೂ ಮುಂದುವರೆಯಿತು.ಇದರಲ್ಲಿ ರಾಜನು ಪರಮಾಧಿಕಾರ ಹೊಂದಿದ್ದನು. ಧರ್ಮಶಾಸ್ತ್ರ ಮತ್ತು ನೀತಿ ಶಾಸ್ತ್ರಗಳಲ್ಲಿ ರಾಜನ ಹಾಗೂ ಪ್ರಜೆಗಳ ಹಿತಾಸಕ್ತಿಯು ಸಮಾನವೆಂದು ಪರಿಗಣಿಸಲ್ಪಟ್ಟಿದ್ದಿತು. ನ್ಯಾಯಾಡಳಿತ, ಪ್ರಜಾರಕ್ಷಣೆ, ಸಮಾಜ ವ್ಯವಸ್ಥೆ ಕಾಪಾಡುವಿಕೆ, ಅರ್ಥ ನಿರ್ವಹಣೆ, ಶಿಷ್ಟ ರಕ್ಷಣೆ, ದುಷ್ಟ ದಂಡನೆ, ಲೋಕೋಪಯೋಗಿ ಕಾರ್ಯಕ್ರಮಗಳನ್ನು ಕೈಗೊಳ್ಳುವಿಕೆ ಮತ್ತು ಧರ್ಮಾನುಸರಣೆಯಂತಹ ಜವಾಬ್ದಾರಿಗಳು ಈ 'ರಾಜಧರ್ಮ'ದ ಆಡಳಿತ ಕ್ರಮಕ್ಕೆ ಒಳಪಟ್ಟಿದ್ದವು. ಈ ಆಡಳಿತ ವ್ಯವಸ್ಥೆಯಲ್ಲಿ ಶಿಸ್ತು ನಿಯಂತ್ರಿಸಲು ಹಾಗೂ ಕಾರ್ಯಕ್ರಮಗಳನ್ನು ನಿರ್ವಹಿಸಲು ವಿವಿಧ ಇಲಾಖಾ ವ್ಯವಸ್ಥೆಗಳು ಇದ್ದವು. ಇಂತಹ ಸಾಂಪ್ರದಾಯಕ ವಿಭಾಗಗಳು ಮೈಸೂರು ಅರಸರ ಕಾಲದಲ್ಲಿಯೂ ಮುಂದುವರೆದವು.

ಆದರೆ, ಮೈಸೂರಿನ ಚಿಕ್ಕದೇವರಾಜಒಡೆಯರ್ (೧೬೭೩–೧೭೦೪) ತನ್ನ ಆಡಳಿತ ಪದ್ಧತಿಯಲ್ಲಿ ಸಮಗ್ರ ಬದಲಾವಣೆ ತಂದನು. ಆತನು ಮೊಘಲ್ ಮಾದರಿಯ ಆಡಳಿತ ಕ್ರಮವನ್ನು ರಾಜ್ಯಾಡಳಿತಕ್ಕೆ ಸರಿಹೊಂದುವಂತೆ ರೂಪಿಸಿಕೊಳ್ಳುವ ಸಲುವಾಗಿ ತನ್ನ ರಾಯಭಾರಿ ನಿಯೋಗವನ್ನು ಮೊಘಲ್ ಚಕ್ರವರ್ತಿಗಳ ಆಸ್ಥಾನಕ್ಕೆ ಕಳುಹಿಸಿ, ಆ ನಿಯೋಗದ ಸಲಹೆ ಮೇರೆಗೆ ಆ ಕಾಲಕ್ಕೆ ಪ್ರಸಿದ್ಧಿ ಪಡೆದ ಹದಿನೆಂಟು ಚಾವಡಿ (ವಿಭಾಗ ಅಥವಾ ಇಲಾಖೆ) ಗಳನ್ನು ಸ್ಥಾಪಿಸಿ (೧೭೦೦–೧೭೦೪) ಆಡಳಿತವನ್ನು ಸಂಪೂರ್ಣವಾಗಿ ಕೇಂದ್ರೀಕೃತಗೊಳಿಸಿದನು. ಈ ಹದಿನೆಂಟು ಚಾವಡಿಗಳೇ ಮುಂದೆ ಅಠಾರ ಕಚೇರಿ ಎಂದು ಮನ್ನಣೆ ಪಡೆದವು. ಬ್ರಿಟಿಷ್ ಆಡಳಿತಕ್ಕೆ ಒಳಪಟ್ಟ ಆನಂತರವೂ ಮೈಸೂರು ಸಂಸ್ಥಾನದಲ್ಲಿ ಈ ಆಡಳಿತ ವ್ಯವಸ್ಥೆಯು ಜಾರಿಯಲ್ಲಿದ್ದಿತು. ಈ ಹದಿನೆಂಟು ಕಚೇರಿಗಳ ಸಮೂಹವು ಮೈಸೂರು, ಶ್ರೀರಂಗಪಟ್ಟಣ ಹಾಗೂ ಬೆಂಗಳೂರಿನ ಟಿಪ್ಪು ಅರಮನೆ, ಆನಂತರದಲ್ಲಿ ಈಗಿನ ಹೈಕೋರ್ಟ್‌ನ (ಶ್ರೇಷ್ಠ ನ್ಯಾಯಾಲಯ) ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಬಗ್ಗೆ ದಾಖಲೆಗಳು ಇವೆ. ಈಗಲೂ ಶ್ರೇಷ್ಠ ನ್ಯಾಯಾಲಯ ಕಟ್ಟಡವನ್ನು 'ಅಠಾರ ಕಚೇರಿ' ಎಂದು ಗುರುತಿಸುವುದು ರೂಢಿಯಲ್ಲಿದೆ. ಈ ಚಾವಡಿಗಳು ಕ್ರಮವಾಗಿ ೧. **ನಿರೂಪದ ಚಾವಡಿ:**

ಸಾರ್ವಜನಿಕರಿಂದ ಮನವಿ ಸ್ವೀಕರಿಸಿ ದಾಖಲುಮಾಡಿ, ವರದಿ ತಯಾರಿಸುವ ಹಾಗೂ ಅವುಗಳ ವಿಲೇವಾರಿ ಮಾಡುವ ಇಲಾಖೆ ೨. **ಆಯುಕಟ್ಟಿನ ಚಾವಡಿ:** ೮೪ ಆಡಳಿತ ಘಟಕಗಳನ್ನೊಳಗೊಂಡ ಸಿವಿಲ್ ಮತ್ತು ಮಿಲಿಟರಿ ಲೆಕ್ಕಪತ್ರ ಇಲಾಖೆ ೩. **ಮೈಸೂರು ಹೋಬಳಿ ವಿಚಾರ ಚಾವಡಿ:** ದಕ್ಷಿಣ ಆಡಳಿತೀಯ ಘಟಕಗಳ ವ್ಯವಹಾರದ ಮೇಲೆ ಇರುವ ವಿಚಾರಣಾ ಇಲಾಖೆ ೪. **ಪಟ್ಟಣ ಹೋಬಳಿ ವಿಚಾರ ಚಾವಡಿ** ೫. **ಸೀಮೆ ಕಂದಾಚಾರದ ಚಾವಡಿ:** ಪೌರ ಹಾಗೂ ಮಿಲಿಟರಿ ಸ್ಥಾವರಗಳ ಲೆಕ್ಕ ಪತ್ರಗಳನ್ನಿಡುವುದು, ಅಗತ್ಯವಾದ ಶಸ್ತ್ರಾಸ್ತ್ರಗಳು ಮತ್ತು ಮದ್ದು ಗುಂಡುಗಳ ವ್ಯವಹಾರ ನೋಡಿಕೊಳ್ಳುವ ಇಲಾಖೆ ೬. **ಬಾಗಿಲ ಕಂದಾಚಾರದ ಚಾವಡಿ:** ಮಿಲಿಟರಿ ಮತ್ತು ಪೌರ ಹುಜೂರ್ ಅಧಿಕಾರಿಗಳು ಮತ್ತು ಪಾಳೇಗಾರರಿಗೆ ಸಂಬಂಧಪಟ್ಟ ಲೆಕ್ಕಪತ್ರ ವಿಭಾಗ ೭. **ಸುಂಕದ ಚಾವಡಿ:** ಸರಕು ಸಾಗಾಣಿಕೆಯ ಸುಂಕದ ಒಟ್ಟು ಲೆಕ್ಕ, ಆಮದು ಮತ್ತು ರಫ್ತು ತೆರಿಗೆ ವಿಭಾಗ ೮. **ಪೊಮ್ಮಿನ ಚಾವಡಿ:** ವಿಶೇಷವಾದ ತೆರಿಗೆ ಇಲಾಖೆ ೯. **ತೋಡಾಯದ ಚಾವಡಿ:** ಶ್ರೀರಂಗಪಟ್ಟಣದ ಕೆಲವು ನಿರ್ದಿಷ್ಟ ವರ್ಗಗಳಿಂದ ಮಾತ್ರ (ಸುಂಕಗಳನ್ನಾಗಿ) ಪ್ರವೇಶ ತೆರಿಗೆಯನ್ನು ವಸೂಲಿ ಮಾಡುವ ಇಲಾಖೆ ೧೦. **ಪಟ್ಟಣ ಹೋಬಳಿ ಅಷ್ಟಗ್ರಾಮದ ಚಾವಡಿ:** ಚಿಕ್ಕದೇವರಾಜ ಸಾಗರ ನಾಲೆಯ ಕೆಳಗಿನ ಎಂಟು ಹೋಬಳಿಗಳ ಅಧಿಕಾರ ವ್ಯಾಪ್ತಿ ಉಳ್ಳ ಇಲಾಖೆ ೧೧. **ಮೈಸೂರು ಹೋಬಳಿ ಅಷ್ಟಗ್ರಾಮದ ಚಾವಡಿ** ೧೨. **ಬೆಣ್ಣೆ ಚಾವಡಿ:** ಅರಮನೆಗೆ ಸಂಬಂಧಿಸಿದ ದನಕರುಗಳ ಸಾಕಾಣಿಕೆ, ಪ್ರತಿ ದಿನದ ಹಾಲು ಉತ್ಪನ್ನಗಳ ಸಂಗ್ರಹಣೆ, ವಿನಿಯೋಗಕ್ಕೆ ಸಂಬಂಧಿಸಿದ ಲೆಕ್ಕಪತ್ರ ವಿಭಾಗ ೧೩. **ಪಟ್ಟಣದ ಚಾವಡಿ:** ಅರಮನೆ, ಕೋಟೆ, ಕೊತ್ತಲಗಳು, ಉಗ್ರಾಣಗಳು, ಆಯುಧಾಗಾರಗಳು ಹಾಗೂ ರಾಜಧಾನಿಯಲ್ಲಿ ಕಾನೂನು ವ್ಯವಸ್ಥೆಯನ್ನು ಕಾಪಾಡುವ ಹೊಣೆಗಾರಿಕೆಯ ಇಲಾಖೆ ೧೪. **ಬೇಹಿನ ಚಾವಡಿ:** ಇದು ಗುಪ್ತಚಾರ ಇಲಾಖೆ ಹಾಗೂ ತುರ್ತು ಅಂಚೆ ವ್ಯವಸ್ಥೆ ೧೫. **ಸಮ್ಮುಖದ ಚಾವಡಿ:** ರಾಜಮನೆತನದವರು,ಅರಮನೆಯ ವಿವಿಧ ವಿಭಾಗಗಳ ಅಧೀನ ಸಿಬ್ಬಂದಿ ಕುರಿತಾದ ಲೆಕ್ಕಪತ್ರ ಇಲಾಖೆ ೧೬.**ದೇವಸ್ಥಾನದ ಚಾವಡಿ** ೧೭. **ಕಬ್ಬಿಣದ ಚಾವಡಿ:** ಕಬ್ಬಿಣದ ಗಣಿಗಳು, ಕಬ್ಬಿಣ ಉಪಕರಣಗಳ ತಯಾರಿಕೆ, ವಿತರಣೆ ಇತ್ಯಾದಿಗಳಿಗೆ ಸಂಬಂಧಿಸಿದ ವ್ಯವಹಾರಗಳ ಇಲಾಖೆ ಮತ್ತು ೧೮. **ಹೊಗೆಸೊಪ್ಪಿನ ಚಾವಡಿ:** ಹೊಗೆಸೊಪ್ಪು ಕೊಳ್ಳುವುದು ಮತ್ತು ಮಾರುವುದರ ಕುರಿತಾದ ಇಲಾಖೆ. ಈ ಒಂದೊಂದು ವಿಭಾಗದಲ್ಲಿಯೂ ಒಬ್ಬ ಮೇಲ್ವಿಚಾರಕ (ಗೊತ್ತುಗಾರ), ಮೂವರು ದಾಖಲೆ ಇಡುವವರು, ಗುಮಾಸ್ತರು, ರಾಯಸದವರು (ಬರೆಯುವವರು), ಒಬ್ಬ ದಫೇದಾರ, ಊಳಿಗದವರು, ಗೊಲ್ಲ, ಕಾವಲುಗಾರ ಮತ್ತು ದೀವಟಿಗೆಯವರು ಇರುತ್ತಿದ್ದರು. ಚಾವಡಿಗಳ ಕಾರ್ಯವಿಧಾನ, ಅದಕ್ಕೆ ಸಂಬಂಧಿಸಿದ ಗೌಪ್ಯ ವಿವರಗಳನ್ನು ರಾಜನಿಗೆ ವರದಿ ಮಾಡಲು ಬೇಹುದಳ ಒಂದು ಇರುತ್ತಿದ್ದಿತು. ಹೀಗಾಗಿ, ಇಲಾಖೆಯ ಕುಂದುಕೊರತೆಗಳನ್ನು ತಕ್ಷಣ ಸರಿಪಡಿಸಲು ಸಾಧ್ಯವಾಗುತ್ತಿದ್ದಿತು. ಈ ಕೇಂದ್ರ ಚಾವಡಿಗಳು ಸಾಕಷ್ಟು ಅಧಿಕಾರವನ್ನೂ ಹೊಂದಿದ್ದವು.

ಆನಂತರದಲ್ಲಿ ಸರ್ಕಾರದ ಉದ್ದೇಶಗಳಿಗಾಗಿ ಒಂದು ವ್ಯವಸ್ಥಿತವಾದ ಅಂಚೆ ಇಲಾಖೆ ರೂಪುಗೊಂಡಿತು. ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಆಡಳಿತಾವಧಿಯಲ್ಲಿ ಬ್ರಿಟಿಷ್ ಸರ್ಕಾರವು ೧೮೩೧ರಲ್ಲಿ ಕಮೀಷನರ್ ಆಳ್ವಿಕೆಯನ್ನು ಜಾರಿಗೆ ತಂದಿತು. ಈ ಅವಧಿಯಲ್ಲಿ ಸರ್ ಮಾರ್ಕ್ ಕಬ್ಬನ್, ಲಾರ್ಡ್ ಬೌರಿಂಗ್ ಮೊದಲಾದವರ ಆಡಳಿತ ಚಾಣಾಕ್ಷತೆಯಿಂದಾಗಿ ಮೈಸೂರಿನ ಆಡಳಿತವು ಬಹಳಷ್ಟು ಸುಧಾರಿಸಿತು. ಸಂಸ್ಥಾನಿಕರ ಆಡಳಿತಾಧಿಕಾರ ಪ್ರಧಾನವಾದ ಮೇಲೆ (೧೮೮೧) ಕಮೀಷನರ್ ಹುದ್ದೆ ರದ್ದಾಯಿತು. ಮೈಸೂರು ಅರಮನೆಯಲ್ಲಿ ಇದ್ದ ಒಬ್ಬ ರೆಸಿಡೆಂಟ್ ಜೊತೆಯಲ್ಲಿ ನೇಮಕಗೊಂಡ ದಿವಾನರ ಹುದ್ದೆ ಹೆಚ್ಚು ಪ್ರಾಮುಖ್ಯತೆ ಪಡೆಯಿತು. ಆದರೆ, ಸೈನ್ಯ, ರೈಲ್ವೆ, ತಂತಿ, ನಾಣ್ಯ, ದಂಡುಪ್ರದೇಶಗಳ ಮೇಲೆ ಬ್ರಿಟಿಷರ ಹತೋಟಿ ಮುಂದುವರೆಯಿತು.

ಕಮೀಷನರ್ ನೇತೃತ್ವದ ಆಡಳಿತ ವ್ಯವಸ್ಥೆಯಲ್ಲಿ ಸ್ವತಂತ್ರವಾಗಿ ಕೆಲಸ ಮಾಡುವ ಅನೇಕ ವಿಭಾಗಗಳನ್ನು ಕಬ್ಬನ್ ಸ್ಥಾಪಿಸಿದನು. ಅವುಗಳೆಂದರೆ ಕಂದಾಯ, ಅಂಚೆ, ಆರಕ್ಷಕ ದಳ, ಲೋಕೋಪಯೋಗಿ (ಕಾಮಗಾರಿ),

ಸೈನ್ಯ, ವೈದ್ಯಕೀಯ, ಜಾನುವಾರು, ನ್ಯಾಯ ಮತ್ತು ಶಿಕ್ಷಣ ಇಲಾಖೆ. ಸ್ವಾತಂತ್ರ್ಯಪೂರ್ವದ ಸಂಸ್ಥಾನಿಕರ ಆಡಳಿತ ಮತ್ತು ಬ್ರಿಟಿಷ್ ಪ್ರಾಂತ್ಯಗಳಲ್ಲಿಯ ಆಡಳಿತ ವ್ಯವಸ್ಥೆಯನ್ನು ನಮ್ಮ ರಾಜ್ಯವು ಅಳವಡಿಸಿಕೊಂಡಿತು.

೧೮೮೧ರ ಮಾರ್ಚ್ ತಿಂಗಳಲ್ಲಿ ರಾಜ್ಯದ ಆಡಳಿತವನ್ನು ರಾಜವಂಶಕ್ಕೆ ಬಿಟ್ಟುಕೊಟ್ಟಾಗ ಸಾಮಾನ್ಯ ಕಂದಾಯ ಇಲಾಖೆ, ಲೋಕೋಪಯೋಗಿ ಇಲಾಖೆ, ವಿದ್ಯಾ ಇಲಾಖೆ ಮತ್ತು ಸೈನ್ಯದಳ ಈ ನಾಲ್ಕು ಇಲಾಖೆಗಳು ಕಾರ್ಯದರ್ಶಿಗಳ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಮುಂದೆ ಈ ಇಲಾಖೆಗಳು ದೊಡ್ಡದಾಗಿ ಬೆಳೆದಂತೆ ಪ್ರತ್ಯೇಕ ಇಲಾಖೆಗಳನ್ನು ಸೃಷ್ಟಿಸಿ ಅಧಿಕಾರಿಗಳನ್ನು ನೇಮಿಸಲಾಯಿತು. ಹೀಗೆ ಉಂಟಾದ ಹೊಸ ಇಲಾಖೆಗಳೆಂದರೆ– ಅರಣ್ಯ ಮತ್ತು ಶಾಂತಿ ಪಾಲನೆ ಇಲಾಖೆ (೧೮೮೫), ಅಬಕಾರಿ ಇಲಾಖೆ (೧೮೯೯), ಮುಜರಾಯಿ ಇಲಾಖೆ (೧೮೯೧), ಗಣಿ ಇಲಾಖೆ (೧೮೯೪), ಕಂದಾಯ ಇಲಾಖೆ (೧೯೦೨), ವ್ಯವಸಾಯ ಇಲಾಖೆ (೧೯೧೨) ಹಾಗೂ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ (೧೯೧೩). ಭಾರತವು ಸ್ವತಂತ್ರಗೊಂಡಾಗ ಜಿಲ್ಲಾ ಕೇಂದ್ರದಲ್ಲಿ ಹಲವಾರು ಇಲಾಖಾ ಕಚೇರಿಗಳಿದ್ದು ಅವು ಇಂತಿದ್ದವು: ಜಿಲ್ಲಾ ನ್ಯಾಯಾಧೀಶ, ಜಿಲ್ಲಾ ಪೊಲೀಸ್ ಅಧೀಕ್ಷಕ, ವಲಯ ಅರಣ್ಯಾಧಿಕಾರಿ, ಕಾರ್ಯನಿರ್ವಾಹಕ ಅಭಿಯಂತ, ಜಿಲ್ಲಾ ವೈದ್ಯಾಧಿಕಾರಿ, ಪಾನ ನಿರೋಧ ನಿರೀಕ್ಷಕ, ಜಿಲ್ಲಾ ಮಂಡಳಿಯ ಶಾಲೆಗಳ ಆಡಳಿತಾಧಿಕಾರಿ, ಜಿಲ್ಲಾ ವ್ಯವಸಾಯ ಅಧಿಕಾರಿ, ನೈರ್ಮಲ್ಯ ಹಾಗೂ ದೇವಿ ಹಾಕುವ ಪರಿಶೀಲನಾಧಿಕಾರಿ ಕಛೇರಿ ಮುಂತಾದವು.

ಈ ಹಿನ್ನೆಲೆಯಲ್ಲಿ, ಆಡಳಿತ ನಡೆಸುವ ಜನಪರ ಸರ್ಕಾರಗಳು ಜನತೆಯ ಕಲ್ಯಾಣಕ್ಕಾಗಿ ಹೊಸ ಹೊಸ ಯೋಜನೆಗಳನ್ನು ಕಾಲಕಾಲಕ್ಕೆ ರೂಪಿಸಿ, ಅವುಗಳ ಅನುಷ್ಠಾನಕ್ಕಾಗಿ ಹೆಚ್ಚಿನ ಹೊಣೆಗಾರಿಕೆಯನ್ನು ವಿವಿಧ ಇಲಾಖೆಗಳಿಗೆ ವಹಿಸುತ್ತಾಬಂದಿವೆ. ಅದಕ್ಕಾಗಿ, ಆವಶ್ಯವೆನಿಸಿದಾಗ ಹೊಸ ಇಲಾಖೆಗಳನ್ನು ಸಹ ಸೃಷ್ಟಿ ಮಾಡಿ, ಯೋಜನೆಗಳನ್ನು ಅನುಷ್ಠಾನಗೊಳಿಸಿವೆ. ಸರ್ಕಾರದ ಇಂತಹ ಕೆಲವು ಮುಖ್ಯ ಇಲಾಖೆಗಳಾದ ಆರ್ಥಿಕ, ಕೃಷಿ, ಕೈಗಾರಿಕೆ, ಸಹಕಾರ, ಲೋಕೋಪಯೋಗಿ, ಕಾರ್ಮಿಕ ಮುಂತಾದವುಗಳ ಕಾರ್ಯಚಟುವಟಿಕೆ ಹಾಗೂ ಅವುಗಳು ಕೈಗೊಂಡಿರುವ ಪ್ರಗತಿಪರ ಮತ್ತು ಜನಕಲ್ಯಾಣ ಯೋಜನೆಗಳ ಬಗ್ಗೆ ಈಗಾಗಲೇ ಈ ಸಂಪುಟದ ಹಿಂದಿನ ಅಧ್ಯಾಯಗಳಲ್ಲಿ ತಿಳಿಸಲಾಗಿದೆ. ಪ್ರಸ್ತುತ, ಜಿಲ್ಲಾ ಮಟ್ಟದಲ್ಲಿನ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಇಲಾಖೆಗಳು, ಮಂಡಳಿಗಳು, ನಿಗಮಗಳು ಮತ್ತು ಜಿಲ್ಲಾಧಿಕಾರಿಗಳ ನೇರ ಆಡಳಿತಕ್ಕೆ ಒಳಪಡದ ಇಲಾಖಾ ಕಚೇರಿ ಅಥವಾ ಸಂಸ್ಥೆಗಳ ಸ್ಥಾಪನೆ, ಉದ್ದೇಶ, ಅವುಗಳ ಬೆಳವಣಿಗೆಯ ವಿವಿಧ ಹಂತಗಳು ಹಾಗೂ ಕಾರ್ಯಚಟುವಟಿಕೆಗಳನ್ನು ಕುರಿತ ಸ್ಥೂಲ ಪರಿಚಯವನ್ನು ಇಲ್ಲಿ ಮಾಡಿಕೊಡಲಾಗಿದೆ:

### ಅಬಕಾರಿ ಇಲಾಖೆ

ಅಕ್ರಮ ಮದ್ಯ ತಯಾರಿಕೆ ಮತ್ತು ಮಾರಾಟವನ್ನು ತಡೆಗಟ್ಟುವ, ಮಾನವ ಸೇವನೆಗೆ ಯೋಗ್ಯವಾಗಿರುವಂತೆ ಮದ್ಯದ ಗುಣಮಟ್ಟ ಕಾಪಾಡುವ ಅಬಕಾರಿ ವಸ್ತುಗಳ ಬಳಕೆ, ಕಾನೂನುಬಾಹಿರ ಚಟುವಟಿಕೆಗಳ ನಿಯಂತ್ರಣ ಹಾಗೂ ಅಬಕಾರಿ ವರಮಾನದ ಹೆಚ್ಚಳದ ಉದ್ದೇಶದಿಂದ ಅಬಕಾರಿ ಉಪ ಆಯುಕ್ತರ ಕಚೇರಿಯು ಮಂಡ್ಯದಲ್ಲಿ ೧೯೬೭ರಲ್ಲಿ ಸ್ಥಾಪನೆಗೊಂಡಿತು. ಅದಕ್ಕೂ ಹಿಂದೆ ಪಾನನಿಷೇಧ ಜಾರಿಯಿದ್ದ ಕಾರಣ, ಅಬಕಾರಿ ಇಲಾಖಾ ಕಾರ್ಯವನ್ನು ಕಂದಾಯ ಇಲಾಖೆಯು ನಿರ್ವಹಿಸುತ್ತಿದ್ದಿತು. ಜಿಲ್ಲಾ ವ್ಯಾಪ್ತಿಯ ಆಡಳಿತಾಧಿಕಾರವನ್ನು ಹೊಂದಿರುವ ಉಪ ಅಬಕಾರಿ ಆಯುಕ್ತರು ಈ ಕಚೇರಿಯ ಮುಖ್ಯಾಧಿಕಾರಿಯಾಗಿದ್ದು, ಅವರ ಅಧೀನದಲ್ಲಿ ೧೫ ಜನ ಇತರ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ.

ಬಿಯರ್ ಮತ್ತು ಸಾರಾಯಿಯ ಗುಣಮಟ್ಟವನ್ನು ಕಾಪಾಡಿ ಮಾನವ ಸೇವನೆಗೆ ಯೋಗ್ಯವಾಗುವಂತೆ ಮಾಡುವುದು, ಗುತ್ತಿಗೆದಾರರು ನಿಗದಿತ ಅವಧಿಯಲ್ಲಿ ಸರ್ಕಾರಕ್ಕೆ ಗುತ್ತಿಗೆ ಹಣವನ್ನು ಕಟ್ಟುವಂತೆ ಕ್ರಮ ಕೈಗೊಳ್ಳುವುದು, ಅಕ್ರಮ ಮದ್ಯ ಮಾರಾಟ, ತಯಾರಿಕೆ, ಸಾಗಾಣಿಕೆ ಮತ್ತು ಹೊಂದುವಿಕೆಯನ್ನು ತಡೆಗಟ್ಟಲು ಕಾರ್ಯಪಾಲಕ ಸಿಬ್ಬಂದಿಯವರು

ಜಿಲ್ಲೆಯಾದ್ಯಂತ ಗಸ್ತು ತಿರುಗುವುದು, ಅಕ್ರಮಗಳು ಕಂಡುಬಂದಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಂಡು ಮೊಕದ್ದಮೆ ದಾಖಲಿಸುವುದು, ಸನ್ನದು (ಲೈಸೆನ್ಸ್) ನೀಡಲಾದ ಅಂಗಡಿಗಳಲ್ಲಿ ಷರತ್ತುಗಳ ಉಲ್ಲಂಘನೆ ಕಂಡುಬಂದಲ್ಲಿ ಮೊಕದ್ದಮೆ ದಾಖಲಿಸುವುದು ಹಾಗೂ ತಪ್ಪಿತಸ್ಥರಿಗೆ ಸೂಕ್ತ ದಂಡ ವಿಧಿಸುವುದೇ ಮುಂತಾದವು ಈ ಕಚೇರಿಯ ಕಾರ್ಯಚಟುವಟಿಕೆಗಳಾಗಿವೆ. ಕರ್ನಾಟಕ ಅಬಕಾರಿ ಕಾಯ್ದೆ ೧೯೬೫ ಮತ್ತು ಇಲಾಖೆಯಿಂದ ಕಾಲಕಾಲಕ್ಕೆ ಹೊರಡಿಸಲಾದ ಸುತ್ತೋಲೆಗಳನ್ನು ಈ ಕಚೇರಿಯು ತನ್ನ ಕೆಲಸಕಾರ್ಯದಲ್ಲಿ ಅನ್ವಯಿಸಿಕೊಳ್ಳುತ್ತಿದೆ.

ಈ ಕಚೇರಿಯ ಅಧೀನದಲ್ಲಿ ಪ್ರತೀ ತಾಲೂಕಿಗೆ ಒಂದರಂತೆ ವಲಯ ಕಚೇರಿ ಇದ್ದು, ಅಬಕಾರಿ ನಿರೀಕ್ಷಕರ ಮೇಲ್ವಿಚಾರಣೆಯಲ್ಲಿ ಅವು ಕಾರ್ಯನಿರ್ವಹಿಸುತ್ತವೆ. ಮಂಡ್ಯ ನಗರ ಹಾಗೂ ಶ್ರೀರಂಗಪಟ್ಟಣ ತಾಲೂಕಿನ ಗೆಂಡೆ ಹೊಸಹಳ್ಳಿಯಲ್ಲಿ ಕಾಕಂಬಿಯಿಂದ ಮದ್ಯಸಾರ ಉತ್ಪಾದಿಸುವ ಒಂದೊಂದು ಘಟಕವಿದ್ದು, ಅಬಕಾರಿ ಅಧೀಕ್ಷಕರು ಅವುಗಳ ಮೇಲ್ವಿಚಾರಕರಾಗಿದ್ದಾರೆ.ಆಡಳಿತವ್ಯವಸ್ಥೆಯು ಜಿಲ್ಲಾಧಿಕಾರಿ, ಮಂಡ್ಯ ಜಿಲ್ಲೆ ಇವರಿಗೆ ಸೇರಿದ್ದು, ಇಲಾಖೆಗೆ ಸಂಬಂಧಿಸಿದಂತೆ ಅಬಕಾರಿ ಆಯುಕ್ತರು, ಬೆಂಗಳೂರು ಇವರು ಮೇಲಧಿಕಾರಿಯಾಗಿದ್ದಾರೆ.

**ಅರಣ್ಯ ಇಲಾಖೆ**

ಉಪ ಅರಣ್ಯ ಸಂರಕ್ಷಣಾಧಿಕಾರಿ ಅವರ ಕಚೇರಿಯು ಮಂಡ್ಯದಲ್ಲಿ ೧೯೮೭ ರಿಂದ ಕಾರ್ಯಾರಂಭ ಮಾಡಿದೆ. ಪ್ರಾರಂಭದಲ್ಲಿ ಒಂದು ವರ್ಷದ ಅವಧಿಗೆ ೧೯೭೧ರಲ್ಲಿ ಪ್ರಾರಂಭವಾದ ಮಂಡ್ಯ ಇಎಫ್‌ಪಿಎ ವಿಭಾಗವು ಮೈಸೂರು, ಮಂಡ್ಯ, ಬೆಂಗಳೂರು ಮತ್ತು ಕೋಲಾರ – ಈ ನಾಲ್ಕೂ ರೆವಿನ್ಯೂ ಜಿಲ್ಲೆಗಳ ಅಡಳಿತ ವ್ಯಾಪ್ತಿ ಹೊಂದಿದ್ದಿತು. ೧೯೭೪ ರಿಂದ ಇದು ಪ್ರಾದೇಶಿಕ ವಿಭಾಗವಾಗಿ ಪರಿವರ್ತನೆ ಆಗಿ ಮಂಡ್ಯ, ನಾಗಮಂಗಲ, ಚನ್ನಪಟ್ಟಣ ಹಾಗೂ ಸಾತನೂರು ವಲಯಗಳನ್ನು ಮತ್ತು ಹತ್ತು ಸ್ಪೆಷಲ್ ಡ್ಯೂಟಿ ವಲಯಗಳನ್ನು ಹೊಂದಿ ಕಾರ್ಯ ನಿರ್ವಹಿಸುತ್ತಿದ್ದಿತು. ೧೯೮೪ರಿಂದ ಚನ್ನಪಟ್ಟಣ ಹಾಗೂ ಸಾತನೂರು ವಲಯಗಳು ಬೆಂಗಳೂರು ವಿಭಾಗಕ್ಕೆ ವರ್ಗಾವಣೆ ಆದವು. ೧೯೮೭ರಿಂದ ಮಂಡ್ಯ ಜಿಲ್ಲೆಯಲ್ಲಿ ಪ್ರತ್ಯೇಕ ಅರಣ್ಯ ವಿಭಾಗವು ಅಸ್ತಿತ್ವಕ್ಕೆ ಬಂದಿತು. ಆಗ ಪ್ರಾದೇಶಿಕ ಮತ್ತು ಸಾಮಾಜಿಕ ಅರಣ್ಯ ವಿಭಾಗಗಳು ಒಟ್ಟಾಗಿ ಕಾರ್ಯ ನಿರ್ವಹಿಸುತ್ತಿದ್ದರೂ ೧೯೮೯ರಿಂದ ಸಾಮಾಜಿಕ ಅರಣ್ಯ ವಿಭಾಗವು ಪ್ರತ್ಯೇಕವಾಯಿತು.

ಮಂಡ್ಯದಲ್ಲಿನ ಉಪ ಅರಣ್ಯ ಸಂರಕ್ಷಣಾಧಿಕಾರಿಯ ಕಛೇರಿಯು ಏಳು ಪ್ರಾದೇಶಿಕ ವಲಯಗಳನ್ನು ಹೊಂದಿದೆ. ಮಂಡ್ಯ ಹಾಗು ನಾಗಮಂಗಲಗಳಲ್ಲಿ ಕೇಂದ್ರಸ್ಥಾನ ಹೊಂದಿದ ಎರಡು ಉಪ ವಿಭಾಗಗಳೂ ಇವೆ. ಅರಣ್ಯ ರಕ್ಷಣೆ, ನಿರ್ವಹಣೆಯ ಜವಾಬ್ದಾರಿಯನ್ನು ಪ್ರಾದೇಶಿಕ ವಿಭಾಗ ಹೊಂದಿದ್ದರೆ, ಸಾಮಾಜಿಕ ಅರಣ್ಯ ವಿಭಾಗವು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಪ್ರಾದೇಶಿಕ ವಿಭಾಗದಲ್ಲಿ ೧೬೦ ಜನ ಸಿಬ್ಬಂದಿಯೂ, ಸಾಮಾಜಿಕ ಅರಣ್ಯ ವಿಭಾಗದಲ್ಲಿ ೯೯ ಜನ ಸಿಬ್ಬಂದಿಯೂ ಇದ್ದಾರೆ.

ಉಪ ಅರಣ್ಯ ಸಂರಕ್ಷಣಾಧಿಕಾರಿಯು ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿದ್ದಾರೆ. ಅವರ ಅಧೀನದ ವಲಯ ಕಛೇರಿಗಳ ಮೇಲ್ವಿಚಾರಣೆ ಸಹಾಯಕ ಅರಣ್ಯಾಧಿಕಾರಿಗಳದ್ದಾಗಿರುತ್ತದೆ. ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಮಂಡ್ಯ ಅವರು ಮೇಲಧಿಕಾರಿಯಾಗಿರುತ್ತಾರೆ.

ಅರಣ್ಯ ಅಭಿವೃದ್ಧಿಯಡಿ ಸಸ್ಯ ಕ್ಷೇತ್ರ ಬೆಳೆಸುವುದು, ನೆಡುತೋಪು ನಿರ್ಮಿಸುವುದು ಮತ್ತು ಸಸಿಗಳನ್ನು ರೈತರಿಗೆ ಹಂಚುವುದು ಈ ಕಚೇರಿಯ ಮುಖ್ಯ ಧ್ಯೇಯೋದ್ದೇಶಗಳಾಗಿವೆ. ಜಿಲ್ಲೆಯಲ್ಲಿ ಲಭ್ಯವಿರುವ 'ಸಿ' ಮತ್ತು 'ಡಿ' ದರ್ಜೆಯ ಜಮೀನು, ಗೋಮಾಳ, ಕೆರೆಯಂಗಳ, ರಸ್ತೆಬದಿ, ಕಾಲುವೆ ಬದಿಗಳಲ್ಲಿ ಅರಣ್ಯೀಕರಣ ಕಾರ್ಯವನ್ನೂ ಈ ಇಲಾಖೆಯು ಕಾರ್ಯಗತಗೊಳಿಸುತ್ತಿದೆ. ಜಿಲ್ಲಾಮಟ್ಟದ ಯೋಜನೆಗಳಾದ ಕಟ್ಟಡ ನಿರ್ಮಾಣ, ಭೂಸಾರ ಸಂರಕ್ಷಣೆ,

ಮೈದಾನ ಪ್ರದೇಶದ ಅರಣ್ಯ ಅಭಿವೃದ್ಧಿ, ಶಾಲಾ ಸಸ್ಯ ಕ್ಷೇತ್ರ, ವಿಕೇಂದ್ರಿಕೃತ ಸಸ್ಯ ಕ್ಷೇತ್ರ ಮುಂತಾದ ಸಾಮಾಜಿಕ ಅರಣ್ಯ ಯೋಜನೆಗಳೂ ಅಸ್ತಿತ್ವದಲ್ಲಿವೆ. ಹಾಗೆಯೇ, ಗ್ರಾಮೀಣ ಅಭಿವೃದ್ಧಿ ಯೋಜನೆಗಳಾದ ಜವಾಹರ್ ರೋಜಗಾರ ಯೋಜನೆ, ಸಮಗ್ರ ಬಂಜರು ಭೂಮಿ ಅಭಿವೃದ್ಧಿ ಯೋಜನೆ ಮುಂತಾದವನ್ನೂ ಈ ಕಚೇರಿಯು ಅನುಷ್ಠಾನಗೊಳಿಸುತ್ತದೆ. ಅರಣ್ಯ ಸಂಹಿತೆಯೂ ಸೇರಿದಂತೆ ಎಲ್ಲಾ ಕರ್ನಾಟಕ ನಾಗರಿಕ ಸೇವಾ ನಿಯಮ ಹಾಗೂ ಆರ್ಥಿಕ ಸಂಹಿತೆ ಮುಂತಾದ ಅಧಿನಿಯಮ, ನಿಯಮಗಳನ್ನು ಈ ಇಲಾಖೆಯು ತನ್ನ ಕೆಲಸಕಾರ್ಯಗಳಲ್ಲಿ ಅನ್ವಯಿಸಿಕೊಳ್ಳುತ್ತದೆ.

**ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ**

ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಯೋಜಿಸುವ ಸಮೀಕ್ಷೆಗಳಲ್ಲಿ ಪಾಲ್ಗೊಳ್ಳುವ ಹಾಗೂ ಜಿಲ್ಲೆಯ ಅಂಕಿ–ಅಂಶಗಳನ್ನು ಸಂಗ್ರಹಿಸಿ ಪ್ರಕಟಿಸುವ ಉದ್ದೇಶದಿಂದ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಅವರ ಕಚೇರಿಯು ಮಂಡ್ಯದಲ್ಲಿ ೧೯೬೦ರಲ್ಲಿ ಪ್ರಾರಂಭಗೊಂಡಿತು. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಯು ಕಚೇರಿಯ ಮುಖ್ಯಾಧಿಕಾರಿಯಾಗಿದ್ದು ಇವರ ನೆರವಿಗೆ ಒಬ್ಬರು ಸಹಾಯಕ ನಿರ್ದೇಶಕ, ನಾಲ್ಕು ಜನ ಸಹಾಯಕ ಸಾಂಖ್ಯಿಕ ಅಧಿಕಾರಿಗಳು, ಇಬ್ಬರು ಸಾಂಖ್ಯಿಕ ನಿರೀಕ್ಷಕರು ಹಾಗೂ ಇಬ್ಬರು ಗಣತಿದಾರ ತಾಂತ್ರಿಕ ಸಿಬ್ಬಂದಿ ಹಾಗೂ ಇನ್ನಿತರ ಎಂಟು ಮಂದಿ ಆಡಳಿತ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕೃಷಿಗೆ ಸಂಬಂಧಿಸಿದಂತೆ ಬೆಳೆಗಳ ವಿಸ್ತೀರ್ಣದ ಅಂಕಿ–ಅಂಶಗಳನ್ನು ಸಂಗ್ರಹಿಸುವುದು ; ತಾಲೂಕುವಾರು, ಗ್ರಾಮವಾರು ಮೂಲ ಅಂಕಿ ಅಂಶಗಳನ್ನು ಸಂಗ್ರಹಿಸುವುದು, ಮಳೆ ಮಾಪನ ಕೇಂದ್ರಗಳ ಸ್ಥಾಪನೆ, ತಪಾಸಣೆ ಹಾಗೂ ಮಳೆಗೆ ಸಂಬಂಧಿಸಿದ ಅಂಕಿ–ಅಂಶಗಳ ಸಂಗ್ರಹಣೆ, ಇಲಾಖಾ ತರಬೇತಿಗಳಲ್ಲಿ ಅಂಕಿ–ಆಂಶಗಳ ಪ್ರಾಮುಖ್ಯತೆ ಬಗ್ಗೆ ತಿಳಿಸುವುದು, ಜನನ – ಮರಣ ನೋಂದಣಿ, ಜಿಲ್ಲಾ ಅಂಕಿ–ಅಂಶ ಹಾಗೂ ಜಿಲ್ಲಾ ಆರ್ಥಿಕ ಮತ್ತು ಸಾಮಾಜಿಕ ಅವಲೋಕನಗಳನ್ನು ಪ್ರಕಟಿಸುವುದು, ರಾಷ್ಟ್ರೀಯ ಮಾದರಿಯ ಸಮೀಕ್ಷೆ, ಬೆಳೆ ಅಂದಾಜು ಸಮೀಕ್ಷೆ, ಬೆಳೆ ವಿಮಾ ಯೋಜನೆ ಸಮೀಕ್ಷೆ, ಕೃಷಿ ಗಣತಿ, ಆರ್ಥಿಕ ಗಣತಿ, ಸಣ್ಣ ನೀರಾವರಿ ಗಣತಿ ನಡೆಸುವುದು ಹಾಗೂ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಸೂಚಿಸುವ ಇತರೆ ಸಮೀಕ್ಷಾ ಕಾರ್ಯ ಮುಂತಾದವನ್ನು ನಡೆಸುವುದು – ಈ ಕಾರ್ಯಾಲಯದ ಇತರ ಕಾರ್ಯಚಟುವಟಿಕೆಗಳಾಗಿವೆ. ಜಿಲ್ಲೆಯ ಆಯಾ ತಾಲೂಕಿನ ತಹಸೀಲ್ದಾರರ ಅಧೀನದಲ್ಲಿ ಸಾಂಖ್ಯಿಕ ನಿರೀಕ್ಷಕರು ಹಾಗೂ ಗಣತಿದಾರರು ಕಾರ್ಯನಿರ್ವಹಿಸುವರು. ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು ಅವರ ನಿರ್ದೇಶನದಂತೆ ಈ ಇಲಾಖೆಯು ಕಾರ್ಯನಿರ್ವಹಿಸುತ್ತದೆ.

**ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ**

ಜಿಲ್ಲೆಯ ಅರ್ಹ ನಾಗರಿಕರಿಗೆ ಅವರ ದೈನಂದಿನ ಅಗತ್ಯ ವಸ್ತುಗಳನ್ನು ಸಾರ್ವಜನಿಕ ವಿತರಣಾ ಪದ್ಧತಿಯಡಿ, ನ್ಯಾಯಬೆಲೆ ಅಂಗಡಿಗಳ ಮೂಲಕ ವಿತರಿಸುವ ಉದ್ದೇಶದಿಂದ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕರ ಕಚೇರಿಯು ಮಂಡ್ಯದಲ್ಲಿ ೧೯೬೪ರಲ್ಲಿ ಪ್ರಾರಂಭಗೊಂಡಿತು.

ಜಿಲ್ಲೆಯ ಎಲ್ಲಾ ತಾಲೂಕು ಕಚೇರಿಗಳ ಆಹಾರ ಶಾಖೆಯ ಸಿಬ್ಬಂದಿಯ ಮೇಲುಸ್ತುವಾರಿ ಕಾರ್ಯ ಉಪನಿರ್ದೇಶಕರದ್ದಾಗಿದ್ದು, ಅವರ ನೆರವಿಗೆ ಒಬ್ಬರು ಸಹಾಯಕ ನಿರ್ದೇಶಕ, ಮೂರು ಜನ ವ್ಯವಸ್ಥಾಪಕರು ಹಾಗೂ ಇನ್ನಿತರ ೧೭ ಜನ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸಾರ್ವಜನಿಕ ವಿತರಣಾ ಪದ್ಧತಿಯಡಿ ನಿಯಂತ್ರಿತ ಅಗತ್ಯ ವಸ್ತುಗಳಾದ ಅಕ್ಕಿ, ಗೋಧಿ, ಸಕ್ಕರೆ ಮತ್ತು ಸೀಮೆಎಣ್ಣೆಯನ್ನು ನ್ಯಾಯಬೆಲೆ ಅಂಗಡಿಗಳ ಮೂಲಕ ಪಡಿತರ ಚೀಟಿದಾರರಿಗೆ ವಿತರಿಸುವುದು, ಅಂತ್ಯೋದಯ ಅನ್ನ, ಹಳದಿ, ಹಸಿರು, ಕೇಸರಿ ಹಾಗೂ ನೀಲಿ (ಫೋಟೋ) ಪಡಿತರ ಚೀಟಿಗಳನ್ನು ಅರ್ಹರಿಗೆ ವಿತರಿಸುವುದು,

ಶಾಲಾ ಮಕ್ಕಳ ಮಧ್ಯಾಹ್ನದ ಉಪಾಹಾರ ಯೋಜನೆ, ಕೃಷಿ ಉತ್ಪನ್ನಗಳ ಬೆಂಬಲ ಬೆಲೆ ಯೋಜನೆ, ಕಬ್ಬು ಮತ್ತು ಸಕ್ಕರೆ ಕಾರ್ಖಾನೆಗಳ ವಿಷಯಗಳು, ಪೆಟ್ರೋಲಿಯಂ ಪದಾರ್ಥಗಳು, ಅಡುಗೆ ಅನಿಲ ಸರಬರಾಜು ವ್ಯವಸ್ಥೆ, ಲೆವಿ ಅಕ್ಕಿ ಸಂಗ್ರಹಣೆ, ಪೆಟ್ರೋಲ್ ಬಂಕ್, ಗ್ಯಾಸ್ ಮಳಿಗೆಗಳ ತನಿಖೆ, ಅಗತ್ಯ ವಸ್ತುಗಳ ಮುಕ್ತ ಮಾರುಕಟ್ಟೆ ವಿಚಾರ ನಿರ್ವಹಣೆ, ಸಾರ್ವಜನಿಕ ವಿತರಣೆಗಾಗಿ ಸಂಘ ಸಂಸ್ಥೆಗಳು, ನಿರುದ್ಯೋಗಿ ಪದವೀಧರರು ಹಾಗೂ ಇತರೇ ವರ್ಗದವರಿಗೆ ನ್ಯಾಯಬೆಲೆ ಅಂಗಡಿ ನಡೆಸಲು ಮಂಜೂರಾತಿ ನೀಡುವುದು– ಮುಂತಾದವು ಈ ಇಲಾಖೆಯ ಕಾರ್ಯ ಚಟುವಟಿಕೆಗಳಾಗಿವೆ.

ತಹಶೀಲ್ದಾರರು ಆಹಾರ ಶಿರಸ್ತೇದಾರ ಹಾಗೂ ಇಬ್ಬರು ಆಹಾರ ನಿರೀಕ್ಷಕರ ಸಹಕಾರದೊಂದಿಗೆ ತಾಲೂಕು ವ್ಯಾಪ್ತಿಯಲ್ಲಿ ಸದರಿ ಕಾರ್ಯ ನಿರ್ವಹಿಸುವರು. ಜಿಲ್ಲಾಧಿಕಾರಿ ಅವರ ಉಸ್ತುವಾರಿಯಲ್ಲಿ ಈ ಇಲಾಖೆಯು ಕಾರ್ಯನಿರ್ವಹಿಸುತ್ತಿದ್ದು, ಆಯುಕ್ತರು, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು ಅವರ ಅಧೀನಕ್ಕೆ ಒಳಪಡುತ್ತದೆ.

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಕುಟುಂಬ ಕಲ್ಯಾಣ ಸೇವೆಗಳನ್ನೊಳಗೊಂಡಂತೆ ಸಾರ್ವಜನಿಕ ಆರೋಗ್ಯ ಪ್ರಾಮುಖ್ಯತೆಯ ವಿವಿಧ ರಾಷ್ಟ್ರೀಯ ಮತ್ತು ರಾಜ್ಯ ಆರೋಗ್ಯ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರುವ ಉದ್ದೇಶದಿಂದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಚೇರಿಯು ಮಂಡ್ಯದಲ್ಲಿ ೧೯೬೪ರಿಂದ ಕಾರ್ಯನಿರ್ವಹಿಸುತ್ತಿದೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಅವರು ಕಚೇರಿಯ ಮುಖ್ಯಾಧಿಕಾರಿಯಾಗಿದ್ದು, ಅವರ ನೆರವಿಗೆ ಜಿಲ್ಲಾ ಕುಷ್ಠ ರೋಗಾಧಿಕಾರಿ, ಜಿಲ್ಲಾ ಮಲೇರಿಯಾಧಿಕಾರಿ, ವೈದ್ಯಾಧಿಕಾರಿ (ಕುಟುಂಬ ಕಲ್ಯಾಣ, ಪ್ರಸೂತಿ ಮತ್ತು ಮಕ್ಕಳ ಆರೋಗ್ಯ ಸೇವೆಗಳು), ಜಿಲ್ಲಾ ಕ್ಷಯರೋಗಾಧಿಕಾರಿ, ಜಿಲ್ಲಾ ಪ್ರಯೋಗಶಾಲಾ ಅಧಿಕಾರಿ ಮತ್ತು ಪ್ರಾದೇಶಿಕ ಸಹಾಯಕ ರಾಸಾಯನಿಕ ವಿಶ್ಲೇಷಕರು (ಜಿಲ್ಲಾಕಣ್ಗಾವಲು ಅಧಿಕಾರಿಗಳು), ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಹಾಗೂ ಇತರೆ ಸಿಬ್ಬಂದಿ ಇದೆ. ಗ್ರಾಮೀಣ ಆರೋಗ್ಯ ಯೋಜನೆ, ವೈದ್ಯಕೀಯ ಅಭಿವೃದ್ಧಿ ಕಾರ್ಯಕ್ರಮ, ತಾಯಿ ಮಕ್ಕಳ ಆರೋಗ್ಯ, ಕುಟುಂಬ ಕಲ್ಯಾಣ ಕಾರ್ಯಕ್ರಮ ಮತ್ತು ಲಸಿಕಾ ಕಾರ್ಯಕ್ರಮ, ರಾಷ್ಟ್ರೀಯ ಕುಷ್ಠ ರೋಗ ನಿರ್ಮೂಲನಾ ಕಾರ್ಯಕ್ರಮ, ಪರಿಷ್ಕೃತ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮ, ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮ, ಪೌಷ್ಠಿಕ ಆಹಾರ ಕಾರ್ಯಕ್ರಮ, ಪ್ರಯೋಗಾಲಯ ಸೇವೆಗಳು, ಆರೋಗ್ಯ ಶಿಕ್ಷಣ ಮತ್ತು ಪರಿಸರ ನೈರ್ಮಲ್ಯ, ರೋಗ ಪರಿಹಾರ ಸೇವೆಗಳು ಹಾಗೂ ಶಾಲಾ ಆರೋಗ್ಯ ಕಾರ್ಯಕ್ರಮ ಮುಂತಾದವನ್ನು ಈ ಕಚೇರಿಯು ಜನರಿಗೆ ಒದಗಿಸುತ್ತಿದೆ.

## ಉದ್ಯೋಗ ಮತ್ತು ತರಬೇತಿ ಇಲಾಖೆ

ಜನಶಕ್ತಿಯ ಬೇಡಿಕೆ ಮತ್ತು ಪೂರೈಕೆಗಳ ನಡುವೆ ಸೂಕ್ತ ಸಮನ್ವಯವನ್ನು ಏರ್ಪಡಿಸುವ ಉದ್ದೇಶದಿಂದ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರವು ಮಂಡ್ಯದಲ್ಲಿ ೧೯೬೦ರಲ್ಲಿ ಸ್ಥಾಪನೆಗೊಂಡಿತು. ಉದ್ಯೋಗ ವಿನಿಮಯ ಅಧಿಕಾರಿಯು ಈ ಕಛೇರಿಯ ಮುಖ್ಯಾಧಿಕಾರಿಯಾಗಿದ್ದು ಅವರ ನೆರವಿಗೆ ವೃತ್ತಿ ಮತ್ತು ಮಾರ್ಗದರ್ಶನ ಉದ್ಯೋಗಾಧಿಕಾರಿ, ಸಹಾಯಕ ಉದ್ಯೋಗಾಧಿಕಾರಿ ಹಾಗೂ ಇತರ ೧೦ ಜನ ಸಿಬ್ಬಂದಿ ಇದೆ.

ನಿರುದ್ಯೋಗಿ ಅಭ್ಯರ್ಥಿಗಳ ಹೆಸರುಗಳ ನೋಂದಣಿ, ಜಿಲ್ಲೆಯ ನಿಯೋಜಕರು ತಮ್ಮ ಸಂಸ್ಥೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಈ ಕಚೇರಿಗೆ ಅಧಿಸೂಚಿಸಿದಾಗ ವಿದ್ಯಾರ್ಹತೆ, ವಯೋಮಿತಿ ಹಾಗೂ ನೋಂದಣಿ ಜ್ಯೇಷ್ಠತೆ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಪುರಸ್ಕರಿಸುವುದು, ಶಾಲೆ, ವಿದ್ಯಾರ್ಥಿ ನಿಲಯ, ಕೈಗಾರಿಕಾ

ತರಬೇತಿ ಸಂಸ್ಥೆ ಹಾಗೂ ಇತರೆ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಿ ವೃತ್ತಿ ಮಾರ್ಗದರ್ಶನ, ವೃತ್ತಿ ಉಪನ್ಯಾಸ, ವೃತ್ತಿ ಸಮ್ಮೇಳನ, ಸಾಹಿತ್ಯ ಪ್ರದರ್ಶನ ನಡೆಸುವುದು; ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಖಾಲಿ ಹುದ್ದೆಗಳ ಕಡ್ಡಾಯ ಅಧಿಸೂಚನೆ ಹೊರಡಿಸುವುದು ಹಾಗೂ ಶಾಸನಾನ್ವಯ ಸಂಸ್ಥೆಗಳ ಪರಿವೀಕ್ಷಣೆ ಕೈಗೊಳ್ಳುವುದು ಮುಂತಾದ ಕಾರ್ಯಗಳನ್ನು ಈ ಕಚೇರಿ ನಿರ್ವಹಿಸುತ್ತಿದೆ.

ತ್ರೈಮಾಸಿಕ ವರದಿ ಸಂಗ್ರಹಣೆ, ಪ್ರತೀ ದ್ವೈವಾರ್ಷಿಕಕ್ಕೊಮ್ಮೆ ಸಾರ್ವಜನಿಕ ಮತ್ತು ಖಾಸಗಿ ವಲಯಗಳಿಂದ ವೃತ್ತಿ ಮತ್ತು ವಿದ್ಯಾರ್ಹತೆ ಆಧಾರ (ಇ.ಆರ್.೨) ವರದಿಗಳ ಸಂಗ್ರಹಣೆ, ಅವುಗಳ ಪರಿಶೀಲನೆ, ನಿರೂಪಣೆ ಮತ್ತು ಸಂಕಲನ, ಉದ್ಯೋಗ ಮಾರುಕಟ್ಟೆ ಕ್ಷೇತ್ರದ ವರದಿ ತಯಾರಿಕೆ ಹಾಗೂ ಹೊಸ ಸಂಸ್ಥೆಗಳನ್ನು ಗುರುತಿಸುವುದು–ಈ ಕಾರ್ಯಾಲಯದ ಇನ್ನಿತರ ಕಾರ್ಯ ಚಟುವಟಿಕೆಯಾಗಿವೆ.

ಉದ್ಯೋಗ ವಿನಿಮಯ ಕೇಂದ್ರಗಳ (ಖಾಲಿ ಹುದ್ದೆಗಳ ಕಡ್ಡಾಯ ಅಧಿಸೂಚನೆ) ಅಧಿನಿಯಮ ೧೯೫೯ ಹಾಗೂ ನಿಯಮಗಳು ೧೯೬೦ ಅನ್ನು ಈ ಕಚೇರಿ ತನ್ನ ಕಾರ್ಯದಲ್ಲಿ ಅನುಸರಿಸುತ್ತಿದೆ. ಇತ್ತೀಚೆಗೆ ಈ ಕಚೇರಿಯು ತನ್ನ ದೈನಂದಿನ ಚಟುವಟಿಕೆಗಳನ್ನು ಗಣಕೀಕರಿಸಿದೆ. ಸಹಾಯಕ ನಿರ್ದೇಶಕರು, ಅಂಗವಿಕಲರ ವಿಶೇಷ ಉದ್ಯೋಗ ವಿನಿಮಯ ಕೇಂದ್ರ, ಮೈಸೂರು ಇವರು ಮೇಲಧಿಕಾರಿಯಾಗಿದ್ದಾರೆ.

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಜಿಲ್ಲೆಯ ಎಲ್ಲಾ ಸರ್ಕಾರಿ ಹಾಗೂ ಸರ್ಕಾರೇತರ ಕಚೇರಿಗಳಲ್ಲಿ ಕನ್ನಡ ಭಾಷೆಯ ಬಳಕೆ, ಸಂಸ್ಕೃತಿ ಪ್ರಚಾರ ಮತ್ತು ಕನ್ನಡ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಉದ್ದೇಶದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯು ಮಂಡ್ಯದಲ್ಲಿ ೧೯೭೮ರಲ್ಲಿ ಕಾರ್ಯಾರಂಭಗೊಂಡಿದೆ. ಸಹಾಯಕ ನಿರ್ದೇಶಕರು ಈ ಕಚೇರಿಯ ಮುಖ್ಯಾಧಿಕಾರಿಯಾಗಿದ್ದು, ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ.

ಕನ್ನಡ ಅಭಿವೃದ್ಧಿ ಕಾರ್ಯಕ್ರಮದಡಿ ಸರ್ಕಾರಿ ನೌಕರರಿಗೆ, ಅಧಿಕಾರಿಗಳಿಗೆ ಆಡಳಿತದಲ್ಲಿ ಕನ್ನಡ ತರಬೇತಿ, ನ್ಯಾಯಾಲಯದಲ್ಲಿ ಕನ್ನಡ ಬಳಕೆ ತರಬೇತಿ, ಕನ್ನಡೇತರರಿಗೆ ಕನ್ನಡ ಕಲಿಸುವುದು, ಜಿಲ್ಲೆಯ ಕಲಾವಿದರನ್ನು ಗುರುತಿಸುವುದು, ಜಿಲ್ಲಾ ಮಟ್ಟದಲ್ಲಿ ಸಾಂಸ್ಕೃತಿಕ ಚಟುವಟಿಕೆ ಮತ್ತು ವಿಚಾರ ಸಂಕಿರಣಗಳನ್ನು ಏರ್ಪಡಿಸುವುದು, ವಿಶೇಷ ಘಟಕ ಯೋಜನೆಯಡಿ ಕಲಾವಿದರನ್ನು ಪ್ರೋತ್ಸಾಹಿಸುವುದು, ತಾಲೂಕಿಗೆ ಒಂದರಂತೆ ಬಯಲು ರಂಗಮಂದಿರ ನಿರ್ಮಿಸುವ ಪ್ರಕ್ರಿಯೆಯಲ್ಲಿ ಧನಸಹಾಯ ಒದಗಿಸುವುದೇ ಮುಂತಾದ ಕಾರ್ಯ ಚಟುವಟಿಕೆಗಳನ್ನು ಈ ಕಾರ್ಯಾಲಯ ನಡೆಸುತ್ತದೆ. ಕಲಾವಿದರ, ಸಾಹಿತಿಗಳ ವೈದ್ಯಕೀಯ ವೆಚ್ಚ ಮರುಪಾವತಿ, ಪರಿಶಿಷ್ಟ ಜಾತಿ/ಪಂಗಡದ ಕಲಾವಿದರಿಗೆ ತಮ್ಮ ಕಲೆಯನ್ನು ಪ್ರದರ್ಶಿಸಲು ಧನಸಹಾಯ ಮಾಡುವುದು, ಸ್ಥಳೀಯ ಕಲಾವಿದರಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಲು ಅವಕಾಶ ಮಾಡಿಕೊಡುವುದು, ಅದಕ್ಕಾಗಿ ಸಂಭಾವನೆ ನೀಡುವುದು, ಜನಪದ ಕಲಾವಿದರಿಗೆ ಗೌರವಧನ ಹಾಗೂ ಮಾಸಾಶನ ದೊರಕಿಸಿಕೊಡುವುದು, ಬಾಲ ಪ್ರತಿಭೆ, ಕಿಶೋರ ಪ್ರತಿಭಾ ಸ್ಪರ್ಧೆ, ಯುವ ಪ್ರತಿಭಾ ಕಾರ್ಯಕ್ರಮ, ಪುಸ್ತಕ ಮಾರಾಟ ಮುಂತಾದ ಚಟುವಟಿಕೆಗಳನ್ನು ಈ ಕಚೇರಿ ಕಾರ್ಯಗತಗೊಳಿಸುತ್ತದೆ. ಉಪನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಅವರ ನಿರ್ದೇಶನದಡಿ ಈ ಕಚೇರಿಯು ಕಾರ್ಯ ನಿರ್ವಹಿಸುತ್ತದೆ.

**ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ**

ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಉಪವಿಭಾಗ ಕಚೇರಿಯು ಮಂಡ್ಯದಲ್ಲಿ ೧೯೭೫ರಲ್ಲಿ ಪ್ರಾರಂಭಗೊಂಡಿತು. ಸಹಾಯಕ ಕಾರ್ಯಪಾಲಕ ಅಭಿಯಂತರರು ಈ ಉಪವಿಭಾಗ ಕಚೇರಿಯ ಮುಖ್ಯಾಧಿಕಾರಿಯಾಗಿದ್ದು ಮಂಡ್ಯ ಜಿಲ್ಲೆಯ ಎಲ್ಲಾ ಪಟ್ಟಣಗಳ ಆಡಳಿತ ವ್ಯಾಪ್ತಿಯನ್ನು ಹೊಂದಿದ್ದಾರೆ.

ಮಂಡ್ಯ ನಗರ, ಮದ್ದೂರು, ಮಳವಳ್ಳಿ, ಶ್ರೀರಂಗಪಟ್ಟಣ, ಕೆ.ಆರ್.ಪೇಟೆ, ಪಾಂಡವಪುರ ಹಾಗೂ ನಾಗಮಂಗಲ ಪಟ್ಟಣಗಳ ನೀರು ಸರಬರಾಜು ಹಾಗೂ ಒಳಚರಂಡಿಗೆ ಸಂಬಂಧಪಟ್ಟ ಕೆಲಸಕಾರ್ಯಗಳ ನಿರ್ವಹಣೆ ಈ ಕಚೇರಿಯದ್ದಾಗಿದೆ. ಈ ಮಂಡಳಿಗೆ ಸಂಬಂಧಿಸಿದ ಕಾಯ್ದೆ ಮತ್ತು ನಿಯಮಗಳನ್ನು ಕಚೇರಿಯು ತನ್ನ ಕೆಲಸದಲ್ಲಿ ಅನ್ವಯಗೊಳಿಸುತ್ತಿದೆ. ಸಹಾಯಕ ಕಾರ್ಯಪಾಲಕ ಅಭಿಯಂತರರ ನೆರವಿಗೆ ೬೫ ಜನ ಇತರ ಸಿಬ್ಬಂದಿ ವರ್ಗವಿದೆ. ಕಾರ್ಯಪಾಲ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗ ನಂ.೧, ಮೈಸೂರು ಇವರು ಮೇಲಧಿಕಾರಿಯಾಗಿರುತ್ತಾರೆ.

**ಕರ್ನಾಟಕ ಭೂ ಸೇನಾ ನಿಗಮ ನಿಯಮಿತ**

ಕರ್ನಾಟಕ ಭೂ ಸೇನಾ ನಿಗಮ ನಿಯಮಿತದ ವಿಭಾಗಿಯ ಕಚೇರಿಯು ಮಂಡ್ಯದಲ್ಲಿ ೧೯೭೫ರಲ್ಲಿ ಕಾರ್ಯಾರಂಭ ಮಾಡಿತು. ಉಪನಿರ್ದೇಶಕರು ಈ ಕಾರ್ಯಾಲಯದ ಮುಖ್ಯಾಧಿಕಾರಿಯಾಗಿದ್ದು ಇವರ ಅಧಿಕಾರ ವ್ಯಾಪ್ತಿಗೆ ಮಂಡ್ಯ ಜಿಲ್ಲೆ ಹಾಗೂ ೨೦೦೨-೦೩ನೇ ಸಾಲಿನಿಂದ ನೂತನ ಚಾಮರಾಜನಗರ ಜಿಲ್ಲೆಯೂ ಸೇರಿರುವುದರಿಂದ, ಇವರ ನೆರವಿಗೆ ಒಟ್ಟು ಐದು ಜನ ಸಹಾಯಕ ನಿರ್ದೇಶಕರು, ೨೧ ಜನ ತಾಂತ್ರಿಕ ಸಿಬ್ಬಂದಿ ಹಾಗೂ ಇನ್ನಿತರ ೬೩ ಜನ ಸಿಬ್ಬಂದಿ ಇದ್ದಾರೆ. ಗ್ರಾಮೀಣ ಪ್ರದೇಶದಲ್ಲಿರುವ ದುಡಿಯುವ ವಯೋಮಾನದ ನಿರುದ್ಯೋಗಿ ಹಾಗೂ ಅರೆಕಾಲಿಕ ನಿರುದ್ಯೋಗಿಗಳನ್ನು ಸಂಘಟಿಸಿ ಅವರಿಗೆ ಸೈನಿಕ ಶಿಸ್ತಿನಿಂದ ಕೆಲಸ ಮಾಡುವಂತೆ ತರಬೇತಿ ನೀಡುವುದು, ಅಭಿವೃದ್ಧಿ ಆಧಾರಿತ ಕಾಮಗಾರಿಗಳನ್ನು ನಿರ್ಮಿಸಿ ಅವುಗಳ ಉಸ್ತುವಾರಿಯನ್ನು ಎಂಜಿನಿಯರುಗಳ ಮುಖಾಂತರ ನೇರವಾಗಿ ಮಾಡಿಸಿ ಯೋಜನೆಗಳ ಫಲವು ಪೂರ್ಣವಾಗಿ ಕೆಲಸ ಮಾಡುವವರಿಗೆ ಮಧ್ಯವರ್ತಿಗಳಿಲ್ಲದೆ ತಲುಪುವಂತೆ ಮಾಡುವುದು, ಕಾಮಗಾರಿಗಳನ್ನು ಸರ್ಕಾರ ನಿಗದಿಪಡಿಸುವ ದರದಲ್ಲಿಯೇ ನಿರ್ವಹಿಸುವುದು ಮುಂತಾದವು ಭೂಸೇನಾ ಕಚೇರಿಯ ಮುಖ್ಯ ಚಟುವಟಿಕೆಗಳಾಗಿವೆ.

ಅರೆಸರ್ಕಾರಿ ಹಾಗೂ ಕೇಂದ್ರ ಸರಕಾರಗಳಿಂದ ವಹಿಸಲಾದ ಕಾಮಗಾರಿಗಳನ್ನು ನಿರ್ಮಾಣ ಮಾಡಿ ಸಂಬಂಧಪಟ್ಟ ಇಲಾಖೆಯವರಿಗೆ ಹಸ್ತಾಂತರಿಸುವುದು ಈ ಕಚೇರಿಯ ಜವಾಬ್ದಾರಿಯಾಗಿದೆ. ವಿದ್ಯಾರ್ಥಿನಿಲಯ ಮತ್ತು ಆಸ್ಪತ್ರೆ ಕಟ್ಟಡ ನಿರ್ಮಾಣ, ವಿವಿಧ ಇಲಾಖೆಗಳು, ಜಿಲ್ಲಾ ಪಂಚಾಯತ್, ಜಿಲ್ಲಾ ವಯಸ್ಕ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು ವಹಿಸುವ ಕಾಮಗಾರಿಗಳ ಉಸ್ತುವಾರಿ ಹಾಗೂ ನಿರ್ಮಾಣ ಮೊದಲಾದುವು ಈ ನಿಗಮದ ಚಟುವಟಿಕೆಗಳಾಗಿವೆ. ಇವರ ಅಧೀನದಲ್ಲಿ ಕಾರ್ಯನಿರ್ವಹಿಸುವ ಕಚೇರಿಗಳು ಕ್ರಮವಾಗಿ ಮಂಡ್ಯ, ಮಳವಳ್ಳಿ ಹಾಗೂ ಪಾಂಡವಪುರಗಳಲ್ಲಿ ಇದ್ದು, ಮಂಡ್ಯ ಕಚೇರಿಯು ಸಹಾಯಕ ನಿರ್ದೇಶಕರ ಅಧಿಕಾರ ವ್ಯಾಪ್ತಿಯಲ್ಲಿ ಮಂಡ್ಯ ಹಾಗೂ ಶ್ರೀರಂಗಪಟ್ಟಣಗಳನ್ನೊಳಗೊಂಡಿದ್ದರೆ, ಮಳವಳ್ಳಿ ಕಾರ್ಯಾಲಯವು ಮಳವಳ್ಳಿ, ಮದ್ದೂರು ತಾಲೂಕು ವ್ಯಾಪ್ತಿಯನ್ನು ಹೊಂದಿದೆ. ಪಾಂಡವಪುರ ಕಚೇರಿಯು ಪಾಂಡವಪುರ, ಕೆ.ಆರ್.ಪೇಟೆ ಹಾಗೂ ನಾಗಮಂಗಲ ತಾಲೂಕುಗಳ ಅಧಿಕಾರ ವ್ಯಾಪ್ತಿ ಹೊಂದಿದೆ. ಚಾಮರಾಜನಗರ ಕಾರ್ಯಾಲಯದ ವ್ಯಾಪ್ತಿಯಲ್ಲಿ ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ ತಾಲೂಕುಗಳು ಇದ್ದು, ಗುಂಡ್ಲು ಪೇಟೆ ವ್ಯಾಪ್ತಿಯಲ್ಲಿ ಗುಂಡ್ಲುಪೇಟೆ ಹಾಗೂ ತಮಿಳುನಾಡಿನ ಊಟಿಯಲ್ಲಿ ಕೇಂದ್ರೀಯ ವಿದ್ಯಾಲಯ ಸಮಿತಿ ವತಿಯಿಂದ ನಿರ್ಮಿಸುತ್ತಿರುವ ಕಾಮಗಾರಿಗಳು ಈ ಕಛೇರಿಯ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಜಂಟಿ ನಿರ್ದೇಶಕರು, ಕರ್ನಾಟಕ ಭೂ ಸೇನಾ ನಿಗಮ, ಮೈಸೂರು ಇವರು ಮೇಲಧಿಕಾರಿಯಾಗಿರುತ್ತಾರೆ.

**ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ**

ರಾಜ್ಯದ ರೈತರಿಗಾಗಿ ಪ್ರಮಾಣಿತ ಬಿತ್ತನೆ ಬೀಜಗಳ ಉತ್ಪಾದನೆ ಮತ್ತು ವಿತರಣಾ ಉದ್ದೇಶದಿಂದ ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ ಕಾರ್ಯಾಲಯವು ಮಂಡ್ಯದಲ್ಲಿ ೧೯೮೭-೮೩ರಲ್ಲಿ ಪ್ರಾರಂಭಗೊಂಡಿತು. ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವ ವ್ಯವಸ್ಥಾಪಕರು ಈ ಕಚೇರಿಯ ಮುಖ್ಯಾಧಿಕಾರಿಯಾಗಿದ್ದು, ಅವರ ನೆರವಿಗೆ ಒಂಭತ್ತು ಜನ ಇತರೆ ಸಿಬ್ಬಂದಿ ಇದ್ದಾರೆ. ಉಗ್ರಾಣ ಮತ್ತು ಬೀಜ ಸಂರಕ್ಷಣಾ ಕೇಂದ್ರದ ನಿರ್ಮಾಣ ಯೋಜನೆಯನ್ನೂ ಈ ನಿಗಮ ಹಾಕಿಕೊಂಡಿದೆ. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಬೀಜ ನಿಗಮ, ಬೆಂಗಳೂರು ಇವರು ಮೇಲಧಿಕಾರಿಯಾಗಿರುತ್ತಾರೆ.

**ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ**

ರಾಜ್ಯ ಹಣಕಾಸು ಸಂಸ್ಥೆಗಳ ೧೯೫೧ರ ಕಾಯ್ದೆಯನ್ವಯ ಕರ್ನಾಟಕದಲ್ಲಿ ಕೈಗಾರಿಕೆಗಳ ಕ್ರಮಬದ್ಧ ಹಾಗೂ ಸಮತೋಲನದ ಬೆಳವಣಿಗೆಗಾಗಿ ೧೯೫೯ರಲ್ಲಿ ಸ್ಥಾಪನೆಗೊಂಡ ಈ ಸಂಸ್ಥೆ ತನ್ನ ಶಾಖಾ ಕಚೇರಿಯನ್ನು ೧೯೮೫ರಲ್ಲಿ ಮಂಡ್ಯದಲ್ಲಿ ಪ್ರಾರಂಭಿಸಿತು. ಸಹಾಯಕ ಪ್ರಧಾನ ವ್ಯವಸ್ಥಾಪಕರು ಈ ಕಚೇರಿಯ ಮುಖ್ಯಾಧಿಕಾರಿಯಾಗಿದ್ದು ಅವರ ನೆರವಿಗೆ ೩೪ ಜನ ಇತರ ಸಿಬ್ಬಂದಿ ಇದ್ದಾರೆ. ಈ ಕಚೇರಿ ಜಿಲ್ಲಾ ವ್ಯಾಪ್ತಿ ಅಧಿಕಾರವನ್ನು ಹೊಂದಿದ್ದು, ಉದ್ಯಮಿಗಳಿಗೆ ಹೊಸದಾಗಿ ಕೈಗಾರಿಕೆಗಳನ್ನು ಸ್ಥಾಪಿಸಲು ಅಥವಾ ಈಗಾಗಲೇ ಸ್ಥಾಪನೆಗೊಂಡಿರುವ ಕೈಗಾರಿಕೆಗಳ ವಿಸ್ತರಣೆ ಮತ್ತು ನವೀಕರಣ, ಪ್ರವಾಸೋದ್ಯಮ ಮುಂತಾದ ಚಟುವಟಿಕೆಗಳಿಗೆ ದೀರ್ಘಾವಧಿ ಸಾಲ ಸೌಲಭ್ಯ ನೀಡುತ್ತದೆ. ಈ ಕಛೇರಿಯು ರಾಜ್ಯ ಹಣಕಾಸು ನಿಗಮಗಳ ೧೯೫೧ರ ಕಾಯ್ದೆಯ ನಿಯಮಗಳನ್ನು ತನ್ನ ಕೆಲಸ ಕಾರ್ಯಗಳಿಗೆ ಅನ್ವಯಿಸಿಕೊಳ್ಳುತ್ತಿದೆ.

ತಂತ್ರಜ್ಞಾನ ಯೋಜನೆ, ಹೋಟೆಲ್ ಉದ್ದಿಮೆ, ಕೈಗಾರಿಕಾ ವಸಾಹತುಗಳು, ಸಾರಿಗೆ ಉದ್ದಿಮೆ, ಆಧುನೀಕರಣ ಯೋಜನೆ, ಗುಣಮಟ್ಟ ನಿಯಂತ್ರಣ, ಎಲೆಕ್ಟ್ರೋ ಮೆಡಿಕಲ್ ಉಪಕರಣ, ವಿದ್ಯುತ್ ಜನಕ ಯಂತ್ರ, ನರ್ಸಿಂಗ್ ಹೋಂ, ಗಣಕ ಯಂತ್ರ, ಪ್ರವಾಸೋದ್ಯಮ ಚಟುವಟಿಕೆ, ರಸ್ತೆ ನಿರ್ವಹಣೆ, ಅಭಿವೃದ್ಧಿ ಮತ್ತು ನಿರ್ಮಾಣ, ರೋಗಗ್ರಸ್ತ ಘಟಕಗಳ ಪುನರ್‌ವಸತಿ, ವಾಣಿಜ್ಯ ಸಂಕೀರ್ಣ ಮತ್ತು ಗೋದಾಮು ಮೊದಲಾದವುಗಳಿಗೆ ಆರ್ಥಿಕ ನೆರವು ಯೋಜನೆ, ವಿದ್ಯಾವಂತ ನಿರುದ್ಯೋಗಿಗಳು, ಅಂಗವಿಕಲರು, ನಿವೃತ್ತ ಸೈನಿಕರು, ವೃತ್ತಿ ಪರಿಣಿತರಿಗೆ ಸಾಲ ಸೌಲಭ್ಯ ಮುಂತಾದ ಕಾರ್ಯಗಳನ್ನು ಈ ಕಚೇರಿಯು ಅನುಷ್ಠಾನಗೊಳಿಸುತ್ತಿದೆ. ಈ ಕಛೇರಿಯಲ್ಲಿ ಸರಳ ಸಾಲ ಮತ್ತು ಕಡಿಮೆ ಬಡ್ಡಿಯ ಆಧುನೀಕರಣ ಸಾಲವೂ ದೊರೆಯುತ್ತದೆ.

**ಕಾರ್ಖಾನೆ ಮತ್ತು ಬಾಯಲರುಗಳ ಇಲಾಖೆ**

ಕಾರ್ಖಾನೆಗಳ ಪರಿವೀಕ್ಷಕರ ವಿಭಾಗೀಯ ಕಚೇರಿಯು ಮಂಡ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಕಾರ್ಖಾನೆಗಳ ಪರಿವೀಕ್ಷಕರು ಈ ಕಚೇರಿಯ ಮುಖ್ಯಾಧಿಕಾರಿಯಾಗಿದ್ದಾರೆ. ಇವರು ಮಂಡ್ಯ, ಹಾಸನ ಜಿಲ್ಲೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರಾಮನಗರ, ಚನ್ನಪಟ್ಟಣ ಪ್ರದೇಶಗಳ ಅಧಿಕಾರ ವ್ಯಾಪ್ತಿ ಹೊಂದಿರುತ್ತಾರೆ. ಕಾರ್ಖಾನೆಗಳ ನಕ್ಷೆಗಳ ಅನುಮೋದನೆ ನೋಂದಣಿ, ನವೀಕರಣ, ತಿದ್ದುಪಡಿ ಹಾಗೂ ವರ್ಗಾವಣೆ, ಕಾರ್ಮಿಕರ ಮಜೂರಿ ಸಂದಾಯ ಇತ್ಯಾದಿ ಕಾರ್ಯಗಳು ಈ ಪರಿವೀಕ್ಷಕರ ಜವಾಬ್ದಾರಿಗಳಾಗಿವೆ. ಕಾರ್ಖಾನೆಗಳ ಕಾಯ್ದೆ-೧೯೪೮, ಕರ್ನಾಟಕ-ಕಾರ್ಖಾನೆಗಳ ನಿಯಮಗಳು-೧೯೬೯, ಕರ್ನಾಟಕ-ಪೇಮೆಂಟ್ ಆಫ್ ವೇಜಸ್ ರೂಲ್ಸ್ ೧೯೬೩, ಕರ್ನಾಟಕ ವೆಲ್ ಫೇರ್ ಆಫೀಸರ್ಸ್ ರೂಲ್ಸ್-೧೯೬೩, ಕರ್ನಾಟಕ ವೇತನ ಸಂದಾಯ ನಿಯಮಗಳು ೧೯೪೮, ಕರ್ನಾಟಕ ಪ್ರಸೂತಿ

ಕಾಯಿದೆ ಮತ್ತು ಸೌಲಭ್ಯ ನಿಯಮಗಳು ೧೯೬೬ ಮುಂತಾದ ಅಧಿನಿಯಮ ಹಾಗೂ ನಿಯಮಗಳನ್ನು ಈ ಕಚೇರಿಯು ಜಾರಿಗೊಳಿಸುತ್ತದೆ. ಕಾರ್ಖಾನೆಗಳ ಉಪ ಮುಖ್ಯ ಪರಿವೀಕ್ಷಕರು, ಮೈಸೂರು ವಲಯ, ಮೈಸೂರು, ಕಾರ್ಖಾನೆಗಳ ಜಂಟಿ ಮುಖ್ಯ ಪರಿವೀಕ್ಷಕರು – I ಬೆಂಗಳೂರು ಹಾಗೂ ಕಾರ್ಖಾನೆ ಮತ್ತು ಬಾಯ್ಲರುಗಳ ಮುಖ್ಯ ಪರಿವೀಕ್ಷಕರು (ಕೇಂದ್ರ ಕಛೇರಿ) ಬೆಂಗಳೂರು ಅವರು ಇದರ ಮೇಲಧಿಕಾರಿಗಳಾಗಿದ್ದಾರೆ.

## ಕಾನೂನು ಮಾಪನ ಶಾಸ್ತ್ರ ಇಲಾಖೆ

ತೂಕ ಮತ್ತು ಅಳತೆಗಳ ಸತ್ಯಾಪನಾ ಮುದ್ರೆ ಕೆಲಸ, ಕೈಗಾರಿಕೆಗಳ ತನಿಖೆ ಮತ್ತು ಮೊಕದ್ದಮೆಗಳ ದಾಖಲಾತಿ ಉದ್ದೇಶದಿಂದ, ಮಂಡ್ಯದಲ್ಲಿ ಮಂಡ್ಯ ವೃತ್ತ ಕಚೇರಿಯು ೧೯೬೨ ರಿಂದ ಕಾರ್ಯಾರಂಭ ಮಾಡಿದೆ. ಕಾನೂನು ಮಾಪನ ಶಾಸ್ತ್ರ ಸಹಾಯಕ ನಿಯಂತ್ರಕರು ಈ ಕಚೇರಿಯ ಮುಖ್ಯಸ್ಥರಾಗಿದ್ದು, ಅವರ ನೆರವಿಗೆ ಐವರು ಸಿಬ್ಬಂದಿ ಇದ್ದಾರೆ. ಈ ಸಹಾಯಕ ನಿಯಂತ್ರಕರು ಇಡೀ ಮಂಡ್ಯ ಜಿಲ್ಲಾ ವ್ಯಾಪ್ತಿಯ ಆಡಳಿತಾಧಿಕಾರ ಹೊಂದಿರುವರು. ಇವರ ಅಧಿಕಾರಕ್ಕೆ ಒಳಪಟ್ಟಂತೆ ೧. ಮಂಡ್ಯ ಉಪವಿಭಾಗ (ಮಂಡ್ಯ ಮತ್ತು ಶ್ರೀರಂಗಪಟ್ಟಣ ತಾಲೂಕುಗಳ ಕಾರ್ಯ ವ್ಯಾಪ್ತಿ), ೨. ಮದ್ದೂರು ಉಪವಿಭಾಗ (ಮದ್ದೂರು, ಮಳವಳ್ಳಿ ಕಾರ್ಯವ್ಯಾಪ್ತಿ) ಹಾಗೂ ೩. ಪಾಂಡವಪುರ ಉಪವಿಭಾಗ (ಪಾಂಡವಪುರ, ಕೆ.ಆರ್.ಪೇಟೆ, ನಾಗಮಂಗಲ ಕಾರ್ಯವ್ಯಾಪ್ತಿ) ಗಳಿದ್ದು ಪ್ರತಿ ಉಪವಿಭಾಗದ ಆಡಳಿತಾಧಿಕಾರವನ್ನು ಕಾನೂನು ಮಾಪನಶಾಸ್ತ್ರ ನಿರೀಕ್ಷಕರು ಮೇಲ್ವಿಚಾರಕರಾಗಿ ನೋಡಿಕೊಳ್ಳುವರು. ಕರ್ನಾಟಕ ತೂಕ ಮತ್ತು ಅಳತೆ ಕಾನೂನು ೧೯೮೫ ಹಾಗೂ ನಿಯಮಗಳು ೧೯೮೮ ಮತ್ತು ಪೊಟ್ಟಣ ಸಾಮಗ್ರಿ ಕಾಯ್ದೆ ೧೯೭೬ ಹಾಗೂ ನಿಯಮಗಳು ೧೯೭೭ ಇವುಗಳನ್ನು ಈ ಕಚೇರಿ ತನ್ನ ಕಾರ್ಯದಲ್ಲಿ ಅನುಷ್ಠಾನಗೊಳಿಸುತ್ತದೆ.

## ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

ಜಿಲ್ಲಾ ಕೈಗಾರಿಕಾ ಕೇಂದ್ರವು ೧೯೮೨ರಲ್ಲಿ ಮಂಡ್ಯದಲ್ಲಿ ಪ್ರಾರಂಭಗೊಂಡಿತು. ಅದಕ್ಕೂ ಮೊದಲು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಡಿ ಜಿಲ್ಲಾಮಟ್ಟದಲ್ಲಿ ಇದು ಸಹಾಯಕ ನಿರ್ದೇಶಕರ ಕಚೇರಿಯಾಗಿದ್ದಿತು. ಪ್ರಧಾನ ವ್ಯವಸ್ಥಾಪಕರು ಕಚೇರಿಯ ಮುಖ್ಯಸ್ಥರಾಗಿದ್ದು, ಇತ್ತೀಚೆಗೆ ಈ ಹುದ್ದೆಯನ್ನು ಜಂಟಿ ನಿರ್ದೇಶಕರು ಎಂದು ಪುನರ್ ನಾಮಕರಣ ಮಾಡಿದೆ. ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುವ ಇವರ ನೆರವಿಗೆ ಒಬ್ಬರು ಕೈಗಾರಿಕಾ ಉತ್ತೇಜನಾಧಿಕಾರಿ, ಒಬ್ಬ ಉಪನಿರ್ದೇಶಕ ಹಾಗೂ ಒಬ್ಬ ಅಧೀಕ್ಷಕರೂ ಸೇರಿದಂತೆ ಒಟ್ಟು ಒಂಭತ್ತು ಜನರ ಸಿಬ್ಬಂದಿ ವರ್ಗವಿದೆ. ಕಾಲಕಾಲಕ್ಕೆ ಸರ್ಕಾರ ಹೊರಡಿಸುವ ಕೈಗಾರಿಕಾ ನೀತಿ ನಿಯಮಗಳನ್ನು ಈ ಕಾರ್ಯಾಲಯವು ಅನುಷ್ಠಾನಗೊಳಿಸುತ್ತಿದೆ. ತಾತ್ಕಾಲಿಕ/ಶಾಶ್ವತ ನೋಂದಣಿ ಪತ್ರ ನೀಡುವಿಕೆ, ಸಹಾಯಧನ ಮಂಜೂರಾತಿ, ಮಾರಾಟ ತೆರಿಗೆ ವಿನಾಯಿತಿ, ಜೇನು ಕೃಷಿ, ತೆಂಗಿನ ನಾರು ಉತ್ಪಾದನೆ, ವಿದ್ಯಾವಂತ ನಿರುದ್ಯೋಗಿಗಳಿಗೆ ಸಾಲ ಒದಗಿಸುವುದೇ ಮುಂತಾದವು ಈ ಕಚೇರಿಯ ಕಾರ್ಯಚಟುವಟಿಕೆಗಳಾಗಿವೆ.

ಕೈಗಾರಿಕೆ ಸ್ಥಾಪಿಸಲು ಬರುವಂತಹ ಭಾವೀ ಉದ್ಯಮಿಗಳಿಗೆ ಕೈಗಾರಿಕಾ ಯೋಜನಾ ವಿವರ, ಸಾಲ ದೊರೆಯುವ ಬಗ್ಗೆ ಮಾಹಿತಿ ನೀಡುವುದು, ಕಚ್ಚಾಮಾಲು ದೊರೆಯುವಂತೆ ಮಾಡುವುದು, ಮಾರಾಟದ ಬಗ್ಗೆ ತಿಳಿವಳಿಕೆ ನೀಡುವುದು, ಉತ್ಪಾದನೆ ಪ್ರಾರಂಭಿಸಿದವರಿಗೆ ಶಾಶ್ವತ ನೋಂದಣಿ ಪತ್ರ ನೀಡುವುದು, ಸಹಾಯಧನ ಮಂಜೂರಾತಿ ನೀಡುವುದು, ಸ್ವಂತ ಉದ್ಯೋಗಕ್ಕಾಗಿ ವಿದ್ಯಾವಂತ ನಿರುದ್ಯೋಗಿಗಳಿಗೆ ಬ್ಯಾಂಕುಗಳಿಂದ ಸಾಲ ದೊರೆಯುವಂತೆ ಶಿಫಾರಸ್ಸು ಮಾಡುವುದು, ಪ್ರಧಾನಮಂತ್ರಿಗಳ ರೋಜ್‌ಗಾರ ಯೋಜನೆಯಡಿ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿ ೧೦ ದಿನಗಳ ತರಬೇತಿ ನೀಡುವುದು, ಕೈಗಾರಿಕೆ ಪ್ರಾರಂಭಿಸುವ ಭಾವೀ ಉದ್ಯಮಿಗಳಿಗೆ ಉದ್ಯಮಶೀಲತಾ ತರಬೇತಿ ನೀಡಲು ಶಿಫಾರಸ್ಸು

ಮಾಡುವುದು, ವಿಶ್ವ ಯೋಜನೆಯಡಿ ಗ್ರಾಮಾಂತರ ಕುಶಲ ಕರ್ಮಿಗಳಿಗೆ ಬೇಕಾದ ಸೌಲಭ್ಯ ಹಾಗೂ ತರಬೇತಿ ಒದಗಿಸುವುದು, ಮಹಿಳೆಯರಿಗಾಗಿಯೇ ಇರುವ ಯಶಸ್ವಿನಿ ಯೋಜನೆಯನ್ನು ಅನುಷ್ಠಾನಗೊಳಿಸುವುದೇ ಮುಂತಾದ ಚಟುವಟಿಕೆಗಳು ಈ ಕಾರ್ಯಾಲಯದ್ದಾಗಿವೆ. ಈ ಕಚೇರಿಯ ಅಧೀನದಲ್ಲಿ ತಾಲೂಕು ಕೈಗಾರಿಕಾ ಕೇಂದ್ರಗಳು ಕಾರ್ಯನಿರ್ವಹಿಸುತ್ತವೆ.

**ಕೃಷಿ ಇಲಾಖೆ**

ಕೃಷಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಉದ್ದೇಶದಿಂದ ಜಂಟಿ ಕೃಷಿ ನಿರ್ದೇಶಕರ ಕಚೇರಿಯು ೧೯೬೫ರಲ್ಲಿ ಮಂಡ್ಯದಲ್ಲಿ ಪ್ರಾರಂಭಗೊಂಡಿತು. ಅದಕ್ಕೂ ಪೂರ್ವದಲ್ಲಿ ಸಾಂದ್ರ ಬೇಸಾಯ ಅಭಿವೃದ್ಧಿ ಕಾರ್ಯಕ್ರಮದಡಿ ಜಿಲ್ಲಾಧಿಕಾರಿಗಳ ಉಸ್ತುವಾರಿಯಲ್ಲಿ ಇದು ಕಾರ್ಯನಿರ್ವಹಿಸುತ್ತಿದ್ದಿತು. ಆನಂತರ ಈ ಜವಾಬ್ದಾರಿಯನ್ನು ಉಪ ಕೃಷಿ ನಿರ್ದೇಶಕರಿಗೆ ವಹಿಸಿಕೊಡಲಾಯಿತು. ಇವರು ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿದ್ದು ಜಿಲ್ಲೆಯ ಎಲ್ಲಾ ತಾಲೂಕುಗಳ ಕೃಷಿ ಚಟುವಟಿಕೆಗಳನ್ನು ನಡೆಸುತ್ತಿದ್ದರು. ಉಪ ಕೃಷಿ ನಿರ್ದೇಶಕರ ಹುದ್ದೆಯ ಪದನಾಮವನ್ನು ಪ್ರಧಾನ ಕೃಷಿ ಅಧಿಕಾರಿಯಾಗಿ ಬದಲಾಯಿಸಲಾಯಿತು. ತದನಂತರದಲ್ಲಿ ಕೃಷಿ ಇಲಾಖೆಯನ್ನು ಪುನಾರಚಿಸಿ ಈಗಿರುವಂತೆ ಜಂಟಿ ಕೃಷಿ ನಿರ್ದೇಶಕರನ್ನಾಗಿ ಮೇಲ್ದರ್ಜೆಗೆ ಏರಿಸಲಾಯಿತು. ಜಂಟಿ ನಿರ್ದೇಶಕರ ನೆರವಿಗೆ ೩೮ ಜನರ ಸಿಬ್ಬಂದಿ ವರ್ಗವಿದೆ. ಜಿಲ್ಲೆಯ ರೈತರಿಗೆ ಆಧುನಿಕ ಬೇಸಾಯದ ಬಗ್ಗೆ ತಾಂತ್ರಿಕ ಸಲಹೆ ನೀಡುವುದು, ಕೃಷಿ ಪರಿಕರಗಳಾದ ಬಿತ್ತನೆಯ ಬೀಜ, ರಸಗೊಬ್ಬರ, ಸಸ್ಯ ಸಂರಕ್ಷಣಾ ಔಷಧಿಗಳ ಪೂರೈಕೆ ಹಾಗೂ ಅವುಗಳ ಗುಣಮಟ್ಟದ ಬಗ್ಗೆ ಕಾಯ್ದೆಯನುಸಾರ ಕ್ರಮ ತೆಗೆದುಕೊಳ್ಳುವುದು, ರೈತರಿಗೆ ತರಬೇತಿ ನೀಡುವುದು, ಕೃಷಿ ಉತ್ಪಾದನೆ ಹೆಚ್ಚಿಸಲು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ನಿಗದಿಪಡಿಸುವ ಯೋಜನೆಗಳ ಅನುಷ್ಠಾನ ಇತ್ಯಾದಿ ಕಾರ್ಯಚಟುವಟಿಕೆಗಳನ್ನು ಈ ಕಾರ್ಯಾಲಯ ನಿರ್ವಹಿಸುತ್ತದೆ. ೨೦೦೦-೨೦೦೧ನೇ ಸಾಲಿನಿಂದ ಜಿಲ್ಲೆಯ ಎಲ್ಲಾ ಹೋಬಳಿಗಳಲ್ಲಿ ರೈತ ಸಂಪರ್ಕ ಕೇಂದ್ರಗಳನ್ನು ಸ್ಥಾಪಿಸಿದ್ದು, ರೈತರಿಗೆ ಅಗತ್ಯ ಪರಿಕರ ವಿತರಣೆ ಹಾಗೂ ಮಣ್ಣು ಪರೀಕ್ಷೆ, ಬೀಜ ಪರೀಕ್ಷೆಯಂತಹ ತಾಂತ್ರಿಕ ಮಾಹಿತಿ ನೀಡಲಾಗುತ್ತಿದೆ.

ವಿವಿಧ ಯೋಜನೆ ಹಾಗೂ ಅಭಿವೃದ್ಧಿ ಚಟುವಟಿಕೆಗಳಡಿ ಹಲವಾರು ಜಿಲ್ಲಾ ಹಾಗೂ ರಾಜ್ಯವಲಯ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲಾಗುತ್ತಿದೆ. ಜಿಲ್ಲಾವಲಯ ಕಾರ್ಯಕ್ರಮಗಳಾದ ಹಸಿರು ಮತ್ತು ಮಿಶ್ರ ಗೊಬ್ಬರ ಕಾರ್ಯಕ್ರಮ, ಕೃಷಿ ಮೇಳ, ವಸ್ತು ಪ್ರದರ್ಶನ, ರಾಷ್ಟ್ರೀಯ ದ್ವಿದಳ ಧಾನ್ಯ ಅಭಿವೃದ್ಧಿ ಯೋಜನೆ, ಎಣ್ಣೆಕಾಳು ಬೆಳೆಗಳ ಉತ್ಪತ್ತಿ ಯೋಜನೆ, ವಿಶೇಷ ಘಟಕ ಯೋಜನೆ, ರಾಜ್ಯ ವಲಯ ಕಾರ್ಯಕ್ರಮಗಳಾದ ಸಾವಯವ ಕೃಷಿ ಯೋಜನೆ, ಸಣ್ಣ ಟ್ರಾಕ್ಟರ್ ವಿತರಣಾ ಕಾರ್ಯಕ್ರಮ, ಪವರ್ ಟಿಲ್ಲರ್ ವಿತರಣಾ ಕಾರ್ಯಕ್ರಮ, ಹೈಟೆಕ್ ಉಪಕರಣಗಳ ವಿತರಣಾ ಕಾರ್ಯಕ್ರಮ, ರೈತರಿಗೆ ಅಧಿಕ ಉತ್ಪಾದನಾ ಬಹುಮಾನ ವಿತರಣಾ ಕಾರ್ಯಕ್ರಮ, ಭತ್ತದ ಕಿರುಚೀಲ ಪ್ರಾತ್ಯಕ್ಷಿಕೆ ಯೋಜನೆ, ನವೋದ್ ಬೋರ್ಡ್ (NAVOD-National Vegetable Oil Development Board) ಕಾಯಕ್ರಮ, ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ರಿಯಾಯಿತಿ ದರದಲ್ಲಿ ಪ್ರಮಾಣಿತ ಬಿತ್ತನೆಬೀಜ ವಿತರಣೆ, ಗುಣ ನಿಯಂತ್ರಣ ಕಾರ್ಯಕ್ರಮದಲ್ಲಿ ಪರಿಕರಗಳ ಗುಣಮಟ್ಟ ಪರೀಕ್ಷೆಗಾಗಿ ಬಿತ್ತನೆ ಬೀಜ, ರಸಗೊಬ್ಬರ, ಕೀಟನಾಶಕ ಮಾದರಿಗಳ ಸಂಗ್ರಹಣೆ, ವಿಶ್ಲೇಷಣೆ ಕೈಗೊಂಡು ಕಳಪೆ ಮಾದರಿಗಳ ತಯಾರಕರು ಹಾಗೂ ಮಾರಾಟಗಾರರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡುವುದು, ಮಣ್ಣು ಮಾದರಿ ಸಂಗ್ರಹಣೆ, ವೈಟಪ್ ಯೋಜನೆ ಹಾಗೂ ಜೈವಿಕ ಅನಿಲ ಯೋಜನೆ ಮುಂತಾದ ಕಾರ್ಯಕ್ರಮಗಳೂ ಈ ಇಲಾಖೆಗೆ ಸೇರಿವೆ. ಕೃಷಿ ಆಯುಕ್ತರು, ಬೆಂಗಳೂರು ಇವರ ನಿಯಂತ್ರಣಕ್ಕೆ ಈ ಇಲಾಖೆಯು ಒಳಪಡುತ್ತದೆ.

## ಜಿಲ್ಲಾ ಜಲಾನಯನ ಅಭಿವೃದ್ಧಿ ಇಲಾಖೆ

ಜಿಲ್ಲೆಯಲ್ಲಿ ೧-೧-೨೦೦೦ದಿಂದ ಜಲಾನಯನ ಅಭಿವೃದ್ಧಿ ಇಲಾಖೆಯು ಅಸ್ತಿತ್ವಕ್ಕೆ ಬಂದಿದ್ದು, ಕೃಷಿಗೆ ಸಂಬಂಧಿಸಿದ ಹಲವು ಯೋಜನೆಗಳನ್ನು ಇದು ಕಾರ್ಯಗತಗೊಳಿಸುತ್ತಿದೆ. ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಯು ಜಿಲ್ಲೆಯ ಚಟುವಟಿಕೆಗಳ ಉಸ್ತುವಾರಿ ನೋಡಿಕೊಳ್ಳುತ್ತಾರೆ. ರಾಜ್ಯ ಮಟ್ಟದಲ್ಲಿ ಆಯುಕ್ತರು ಇವರ ಮೇಲಧಿಕಾರಿಯಾಗಿದ್ದಾರೆ.

## ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ

ಗ್ರಾಮೀಣ ಪ್ರದೇಶದ ಕಸಬುದಾರರು, ಕುಶಲಕರ್ಮಿಗಳು, ವಿದ್ಯಾವಂತ ನಿರುದ್ಯೋಗಿಗಳು ಹಾಗೂ ಮಹಿಳೆಯರಿಗೆ ಖಾದಿ ಮತ್ತು ಗ್ರಾಮೋದ್ಯೋಗಗಳನ್ನು ಕೈಗೊಳ್ಳಲು ಆರ್ಥಿಕ ನೆರವು ಹಾಗೂ ತಾಂತ್ರಿಕ ಮಾರ್ಗದರ್ಶನ ನೀಡುವ ಉದ್ದೇಶದಿಂದ ಮಂಡ್ಯದಲ್ಲಿ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಜಿಲ್ಲಾ ಕಚೇರಿಯು ೧೯೬೦ರಲ್ಲಿ ಪ್ರಾರಂಭವಾಯಿತು. ಜಿಲ್ಲಾ ಖಾದಿ ಗ್ರಾಮೋದ್ಯೋಗ ಅಧಿಕಾರಿಯು ಈ ಕಚೇರಿಯ ಮುಖ್ಯಸ್ಥರಿದ್ದು ಅವರ ನೆರವಿಗೆ ವಸೂಲಾತಿ ಅಧಿಕಾರಿಗಳು, ತಾಂತ್ರಿಕ ಮೇಲ್ವಿಚಾರಕರೂ ಸೇರಿದಂತೆ ಏಳು ಜನ ಸಿಬ್ಬಂದಿ ಇದ್ದಾರೆ. ಗ್ರಾಮಗಳಲ್ಲಿ ವಿವಿಧ ಗ್ರಾಮೋದ್ಯೋಗಗಳನ್ನು ಹಾಗೂ ಖಾದಿ ರೇಷ್ಮೆ, ಪಾಲಿವಸ್ತ್ರ, ಉಣ್ಣೆ ಉದ್ದಿಮೆಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ನಿರುದ್ಯೋಗ ಸಮಸ್ಯೆ ನಿವಾರಣಾ ದಿಶೆಯಲ್ಲಿ ಸಹಾಯ ಧನ ಹಾಗೂ ತಾಂತ್ರಿಕ ನೆರವು ನೀಡುವುದು ಈ ಮಂಡಳಿಯ ಗುರಿಯಾಗಿದೆ. ಖಾದಿ ಮತ್ತು ಗ್ರಾಮೋದ್ಯೋಗ ಅಭಿವೃದ್ಧಿ ಹಾಗೂ ಅದನ್ನು ಅನುಷ್ಠಾನಗೊಳಿಸುವ ಕಾರ್ಯನಿರ್ವಹಣೆಯನ್ನೂ ಈ ಕಚೇರಿಯು ನೋಡಿಕೊಳ್ಳುತ್ತದೆ. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಖಾದಿ ಗ್ರಾಮೋದ್ಯೋಗ ಮಂಡಳಿ, ಬೆಂಗಳೂರು ಅವರು ಇದರ ಮೇಲಧಿಕಾರಿಯಾಗಿರುತ್ತಾರೆ.

## ಗಣಿ ಮತ್ತು ಭೂ ವಿಜ್ಞಾನ ಇಲಾಖೆ

ಜಿಲ್ಲೆಯ ಜಲಾನಯನ ಪ್ರದೇಶಗಳಲ್ಲಿ ಅಂತರ್ ಜಲ ಸಮೀಕ್ಷೆ ಮತ್ತು ಕೊಳವೆ ಬಾವಿ ಕೊರೆಯಲು ತಾಂತ್ರಿಕ ಸಲಹೆ ನೀಡುವ ಉದ್ದೇಶದಿಂದ ಮಂಡ್ಯದಲ್ಲಿ ೧೯೭೪ರಲ್ಲಿ ಪ್ರಾರಂಭಗೊಂಡ ಭೂ ವಿಜ್ಞಾನಿಯವರ ಕಛೇರಿಯು ಪ್ರಸ್ತುತ ಹಿರಿಯ ಭೂ ವಿಜ್ಞಾನಿಯವರ ಕಛೇರಿಯಾಗಿ ಪದನಾಮ ಬದಲಾವಣೆ ಹೊಂದಿದ್ದು, ಜಿಲ್ಲಾ ಪಂಚಾಯಿತಿಗೆ ಒಳಪಟ್ಟು ಕಾರ್ಯ ನಿರ್ವಹಿಸುತ್ತಿದೆ. ಭೂ ವಿಜ್ಞಾನಿಯು ಕಚೇರಿಯ ಮುಖ್ಯ ಆಡಳಿತಾಧಿಕಾರಿಯಾಗಿದ್ದು, ಅವರ ನೆರವಿಗೆ ಮೂರು ಜನ ಭೂ ವಿಜ್ಞಾನಿಗಳು, ಒಬ್ಬರು ಭೂಭೌತ ವಿಜ್ಞಾನಿ, ಒಬ್ಬ ಕಿರಿಯ ಇಂಜಿನಿಯರ್ ಹಾಗೂ ಇತರ ಆರು ಜನ ಸಿಬ್ಬಂದಿ ಇದ್ದಾರೆ. ಸಾರ್ವಜನಿಕರು ಹಾಗೂ ಸರ್ಕಾರಿ ಸಂಸ್ಥೆಗಳಿಗೆ ಬಾವಿ ಇಲ್ಲವೆ ಕೊಳವೆ ಬಾವಿ ಕೊರೆಯಲು ವಿವಿಧ ಯೋಜನೆಯಡಿ ತಾಂತ್ರಿಕ ಸಲಹೆ ನೀಡುವುದು, ಜಿಲ್ಲೆಯ ಜಲಾನಯನ ಪ್ರದೇಶದಲ್ಲಿ ಅಂತರ್‌ಜಲ ಸಮೀಕ್ಷೆ, ಜಿಲ್ಲೆಯ ಕೃತಕ ಅಂತರ್‌ಜಲ ಮರು ಪೂರೈಕೆ ರಚನೆಗಳ ನಿರ್ಮಾಣ ಹಾಗೂ ಜಿಲ್ಲೆಯ ಎಲ್ಲಾ ಗ್ರಾಮಗಳಲ್ಲಿ ರಾಸಾಯನಿಕ ವಿಶ್ಲೇಷಣೆಗಾಗಿ ಜಲ ಮಾದರಿ ಸಂಗ್ರಹಿಸಿ ವರದಿ ಮಾಡುವುದು ಮೊದಲಾದ ತಾಂತ್ರಿಕ ಕಾರ್ಯ ಚಟುವಟಿಕೆಗಳನ್ನು ಈ ಕಾರ್ಯಾಲಯ ನಡೆಸುತ್ತದೆ.

## ಗ್ರಾಹಕರ ವೇದಿಕೆ

ಶೋಷಣೆಗೆ ಒಳಗಾಗಿ ನೊಂದ ಗ್ರಾಹಕರಿಗೆ ಸೂಕ್ತ ಪರಿಹಾರ ಒದಗಿಸಿಕೊಡುವ ಉದ್ದೇಶದಿಂದ ಜಿಲ್ಲಾ ಗ್ರಾಹಕ ದೂರುಗಳ ಪರಿಹಾರ ವೇದಿಕೆಯು ಮಂಡ್ಯದಲ್ಲಿ ನವೆಂಬರ್ ೧೯೯೧ರಿಂದ ಕಾರ್ಯಾರಂಭ ಮಾಡಿದೆ.

ಜಿಲ್ಲಾ ವ್ಯಾಪ್ತಿಯನ್ನು ಹೊಂದಿರುವ ಇದರ ಅಧ್ಯಕ್ಷರು, ವೇದಿಕೆಯ ಮುಖ್ಯಾಧಿಕಾರಿಯಾಗಿ ಗ್ರಾಹಕರ ತಕರಾರುಗಳನ್ನು ವಿಚಾರಣೆ ಮಾಡುವರು. ಕರ್ನಾಟಕ ಗ್ರಾಹಕರ ಹಿತರಕ್ಷಣೆ ಕಾಯ್ದೆ ೧೯೮೬ ಹಾಗೂ ಕರ್ನಾಟಕ ಗ್ರಾಹಕರ ಹಿತ ರಕ್ಷಣಾ ನಿಯಮಗಳು ಮತ್ತು ೧೯೮೮ರ ಗ್ರಾಹಕರ ಹಿತರಕ್ಷಣಾ ಕೈಪಿಡಿಗಳನ್ನು ಈ ಕಾರ್ಯಾಲಯ ತನ್ನ ಕೆಲಸಕಾರ್ಯಗಳಲ್ಲಿ ಅನ್ವಯಗೊಳಿಸುತ್ತದೆ. ಅಧ್ಯಕ್ಷರ ನೆರವಿಗೆ ಒಬ್ಬರು ಸಹಾಯಕ ನೋಂದಣಿ ಹಾಗೂ ಸಹಾಯಕ ಆಡಳಿತಾಧಿಕಾರಿ ಮತ್ತು ಒಬ್ಬ ಶಿರಸ್ತೆದಾರರೂ ಸೇರಿದಂತೆ ಒಟ್ಟು ಎಂಟು ಜನರ ಸಿಬ್ಬಂದಿ ವರ್ಗವಿದೆ. ನೊಂದ ಗ್ರಾಹಕರಿಗೆ ಸೂಕ್ತ ಪರಿಹಾರ ಒದಗಿಸಿಕೊಡುವುದಕ್ಕೆ ಸಂಬಂಧಿಸಿದ ಕಾರ್ಯಗಳನ್ನು ಈ ವೇದಿಕೆಯು ನಿರ್ವಹಿಸುತ್ತದೆ.

## ಜಿಲ್ಲಾ ಖಜಾನೆ

ಮಂಡ್ಯ ಜಿಲ್ಲಾ ಖಜಾನೆಯು ಸ್ವಾತಂತ್ರ್ಯ ಪೂರ್ವದಿಂದಲೂ ಕಾರ್ಯನಿರ್ವಹಿಸುತ್ತಿದ್ದು, ಆರಂಭದಲ್ಲಿ ಕಂದಾಯ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿದ್ದಿತು. ಆನಂತರ, ೧೯೬೭ರಿಂದ ಪ್ರತ್ಯೇಕಗೊಂಡು ಖಜಾನೆ ನಿರ್ದೇಶನಾಲಯದ ಆಡಳಿತಕ್ಕೊಳಪಟ್ಟಿರುತ್ತದೆ. ಜಿಲ್ಲಾ ಖಜಾನಾಧಿಕಾರಿಯು ಈ ಕಚೇರಿಯ ಮುಖ್ಯಸ್ಥರಾಗಿರುವುದಲ್ಲದೆ, ತಮ್ಮ ವ್ಯಾಪ್ತಿಯ ಎಲ್ಲಾ ತಾಲೂಕು ಖಜಾನೆಗಳ ನಿಯಂತ್ರಣಾಧಿಕಾರಿಯೂ ಆಗಿರುತ್ತಾರೆ. ಇವರ ನೆರವಿಗೆ ಸಹಾಯಕ ಖಜಾನಾಧಿಕಾರಿಗಳು ಮತ್ತು ಮುಖ್ಯ ಲೆಕ್ಕಿಗರನ್ನೊಳಗೊಂಡಂತೆ ಒಟ್ಟು ೫೨ ಜನರ ಸಿಬ್ಬಂದಿ ಇದೆ. ಮಂಡ್ಯ ಜಿಲ್ಲೆಯ ಜಿಲ್ಲಾ ಪಂಚಾಯಿತಿ, ಗ್ರಾಮ ಪಂಚಾಯಿತಿ, ಪುರಸಭೆ ಹಾಗೂ ನಗರ ಸಭೆಗಳ ಜಮಾಖರ್ಚುಗಳನ್ನು ವ್ಯವಸ್ಥಿತವಾಗಿ ಲೆಕ್ಕಹಾಕಿ ಮಹಾಲೇಖಪಾಲರಿಗೆ ಒಪ್ಪಿಸುವ ಕಾರ್ಯಜವಾಬ್ದಾರಿಯನ್ನು ಈ ಕಚೇರಿಯು ನಿರ್ವಹಿಸುತ್ತಿದೆ. ಕರ್ನಾಟಕ ಆರ್ಥಿಕ ಸಂಹಿತೆ, ಕರ್ನಾಟಕ ಖಜಾನೆ ಸಂಹಿತೆ, ಕರ್ನಾಟಕ ಸಾದಿಲ್ವಾರು ವೆಚ್ಚ ಕೈಪಿಡಿ, ಆಯವ್ಯಯ ಕೈಪಿಡಿ ಮುಂತಾದ ಅಧಿನಿಯಮ, ನಿಯಮಗಳನ್ನು ಕಚೇರಿ ತನ್ನ ಕಾರ್ಯನಿರ್ವಹಣೆಯಲ್ಲಿ ಅನ್ವಯಗೊಳಿಸುತ್ತಿದೆ. ವಿವಿಧ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟ ಬಿಲ್ಲುಗಳನ್ನು ಸಂದಾಯಕ್ಕಾಗಿ ತೀರ್ಮಾನಗೊಳಿಸುವುದು ಮತ್ತು ಇಲಾಖೆಗಳ ಪ್ರಧಾನ ಲೆಕ್ಕ, ಶೀರ್ಷಿಕೆವಾರು ಲೆಕ್ಕಗಳನ್ನು ನಿರ್ವಹಿಸುವ ಜವಾಬ್ದಾರಿ ಸಹ ಈ ಕಚೇರಿಯದ್ದಾಗಿದೆ. ಮಂಡ್ಯ ತಾಲೂಕನ್ನು ಹೊರತುಪಡಿಸಿದಂತೆ ಉಳಿದ ಆರು ತಾಲೂಕುಗಳಲ್ಲಿ ಉಪಖಜಾನೆಗಳಿದ್ದು, ಉಪಖಜಾನಾಧಿಕಾರಿಗಳು ಅವುಗಳ ಮೇಲ್ವಿಚಾರಣೆ ನೋಡಿಕೊಳ್ಳುವರು. ಇಲಾಖೆಯು ಸಮಗ್ರ ಗಣಕೀಕರಣಗೊಂಡಿದ್ದು ದಿನಾಂಕ ೦೧-೧೨-೨೦೦೨ರಿಂದಲೇ ಎಲ್ಲಾ ವ್ಯವಹಾರಗಳು ಆನ್‌ಲೈನ್ ಪದ್ಧತಿಗೆ ಒಳಪಟ್ಟಿರುತ್ತವೆ.

## ತೋಟಗಾರಿಕಾ ಇಲಾಖೆ

ಸಾರ್ವಜನಿಕರಿಗೆ ತರಕಾರಿ, ಹಣ್ಣು, ಅಣಬೆ, ಹೂವು, ಔಷಧಿ ಹಾಗೂ ಸುಗಂಧ ದ್ರವ್ಯ ಬೆಳೆಗಳು ಮತ್ತು ತೋಟಗಾರಿಕೆ ಬೆಳೆಗಳನ್ನು ವೈಜ್ಞಾನಿಕವಾಗಿ ಬೆಳೆಸುವ ಬಗ್ಗೆ ಮಾಹಿತಿ, ಮಾರ್ಗದರ್ಶನ ಹಾಗೂ ತಾಂತ್ರಿಕ ನೆರವನ್ನು ನೀಡುವ ಉದ್ದೇಶದಿಂದ ಮಂಡ್ಯದ ತೋಟಗಾರಿಕೆ ಉಪನಿರ್ದೇಶಕರ ಕಚೇರಿಯು ಜಿಲ್ಲಾ ಪಂಚಾಯ್ತಿಗೆ ಒಳಪಟ್ಟಂತೆ ೧೯೯೨ರಿಂದ ಕಾರ್ಯಾರಂಭ ಮಾಡಿದೆ. ಅದಕ್ಕೂ ಮೊದಲು ೧೯೫೬ರಿಂದ ೧೯೭೧ರವರೆಗೆ ಇದು ಅಸಿಸ್ಟೆಂಟ್ ಸೂಪರಿನ್ಟೆಂಡೆಂಟ್ ಆಫ್ ಪಾರ್ಕ್ಸ್ ಅಂಡ್ ಗಾರ್ಡನ್ಸ್, ಮಂಡ್ಯ ಇವರ ಆಡಳಿತಕ್ಕೆ ಒಳಪಟ್ಟಿದ್ದಿತು. ಮುಂದೆ ೧೯೭೧ರಿಂದ ೧೯೯೨ರವರೆಗೆ ಇದು ಜಿಲ್ಲಾ ತೋಟಗಾರಿಕೆ ಅಧಿಕಾರಿಯ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದಿತು. ಪ್ರಸ್ತುತ ಇದು ತೋಟಗಾರಿಕೆ ಉಪನಿರ್ದೇಶಕರ ಆಡಳಿತಕ್ಕೆ ಒಳಪಟ್ಟಿದ್ದು, ಕಚೇರಿಯ ಅಧಿಕಾರ ವ್ಯಾಪ್ತಿ ಸಂಪೂರ್ಣ ಮಂಡ್ಯ ಜಿಲ್ಲೆಯಾಗಿದೆ. ತೋಟಗಾರಿಕೆ ಉಪನಿರ್ದೇಶಕರು ಈ ಕಚೇರಿಯ ಮುಖ್ಯಾಧಿಕಾರಿಯಾಗಿದ್ದು ಅವರ ನೆರವಿಗೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಸಹಾಯಕ ತೋಟಗಾರಿಕೆ ನಿರ್ದೇಶಕರು, ಸಹಾಯಕ ತೋಟಗಾರಿಕೆ ಅಧಿಕಾರಿ, ತೋಟಗಾರಿಕೆ ಸಹಾಯಕರು ಹಾಗೂ ತೋಟಗಾರರೂ ಸೇರಿದಂತೆ ಒಟ್ಟು ೮೩ ಜನರ ಸಿಬ್ಬಂದಿ ವರ್ಗವಿದೆ.

ಇವರ ಅಧೀನದಲ್ಲಿ ತಾಲೂಕು ಮಟ್ಟದ ಕಚೇರಿಗಳಿದ್ದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಉಸ್ತುವಾರಿಯಲ್ಲಿ ಇಲಾಖೆಯ ಕಾರ್ಯಚಟುವಟಿಕೆಗಳು ನಡೆಯುತ್ತವೆ.

ಜಿಲ್ಲೆಯಲ್ಲಿ ತೋಟಗಾರಿಕೆ ಬಗ್ಗೆ ತಾಂತ್ರಿಕ ಮಾಹಿತಿ ನೀಡುವುದು, ರೈತರಿಗೆ ತರಬೇತಿ ನೀಡುವುದು, ಹಣ್ಣು ಮತ್ತು ತರಕಾರಿ ಬೆಳೆ ಪ್ರದೇಶ, ಸಸ್ಯ ಅಭಿವೃದ್ಧಿ ಮತ್ತು ಅವುಗಳ ನಿರ್ವಹಣೆ, ಪ್ಲಾಂಟೇಶನ್ ಬೆಳೆಗಳ ಬಗ್ಗೆ ಮಾಹಿತಿ ಒದಗಿಸುವುದೇ ಮುಂತಾದ ತೋಟಗಾರಿಕಾ ಅಭಿವೃದ್ಧಿ ಚಟುವಟಿಕೆಗಳನ್ನು ಈ ಕಚೇರಿಯು ನಿರ್ವಹಿಸುತ್ತಿದೆ. ತೆಂಗು ಗೋಟು (ಬೀಜ) ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ ಯೋಜನೆ, ಹಣ್ಣು ಮತ್ತು ತರಕಾರಿಗಳ ಅಭಿವೃದ್ಧಿ, ವಿಚಾರಗೋಷ್ಠಿ, ಕ್ಷೇತ್ರೋತ್ಸವ ಮತ್ತು ಫಲ-ಪುಷ್ಪ ಪ್ರದರ್ಶನಗಳ ಸಂಯೋಜನೆ; ವಿವಿಧ ಸ್ಪರ್ಧೆಗಳನ್ನು ನಡೆಸುವುದು, ಪ್ರಚಾರಸಾಹಿತ್ಯ ಪ್ರಕಟಣೆ, ಕೃಷಿ ಕ್ಷೇತ್ರ ಮತ್ತು ನರ್ಸರಿಗಳಲ್ಲಿ ಮೂಲ ಸೌಕರ್ಯಗಳ ಅಭಿವೃದ್ಧಿ, ತೋಟಗಾರಿಕೆ ಬೆಳೆಗಳ ಪ್ರಚಾರ, ಸಸ್ಯ ಸಂರಕ್ಷಣಾ ಪ್ರಯೋಗಾಲಯಗಳ ನಿರ್ಮಾಣ, ತೆಂಗು ಮತ್ತು ಅಡಿಕೆ ಬೆಳೆಗಳ ಅಣಬೆರೋಗ ನಿಯಂತ್ರಣ, ಹಾಗೂ ಹಣ್ಣು, ತರಕಾರಿ ಸಂರಕ್ಷಣೆ ಮುಂತಾದ ಜಿಲ್ಲಾ ಪಂಚಾಯತ್ ಕಾರ್ಯ ಯೋಜನೆಗಳನ್ನು ಈ ಕಚೇರಿ ಅನುಷ್ಠಾನಗೊಳಿಸುತ್ತಿದೆ. ತಾಲೂಕು ಪಂಚಾಯಿತಿಯ ಕಾರ್ಯಕ್ರಮಗಳಾದ ರೈತರಿಗೆ ತರಬೇತಿ, ಅಲಂಕಾರಿಕಾ ಗಿಡಗಳ ಅಭಿವೃದ್ಧಿ, ತೋಟಗಾರಿಕೆ ಬೆಳೆ ಪ್ರದೇಶ ವಿಸ್ತರಣೆ, ಶೇಕಡಾ ೫೦ ರಷ್ಟು ಸಹಾಯಧನದಲ್ಲಿ ರೈತರಿಗೆ ಸಸ್ಯ ಸಂರಕ್ಷಣಾ ರಾಸಾಯನಿಕಗಳ ವಿತರಣೆ ಹಾಗೂ ವಿಶೇಷ ಘಟಕ ಯೋಜನೆಯಡಿ ರಾಜ್ಯವಲಯ ರೀತ್ಯಾ ಕೃಷಿಯಲ್ಲಿ ಪ್ಲಾಸ್ಟಿಕ್ ಬಳಕೆ ಹಾಗೂ ಹನಿನೀರಾವರಿ ಅಳವಡಿಕೆ, ನಮ್ಮ ಮನೆ ನಮ್ಮ ತೋಟ , ಕೇಂದ್ರ ಪುರಸ್ಕೃತ ಸಮಗ್ರ ಸಾಂಬಾರು ಬೆಳೆ, ಕೋಕೋ ಅಭಿವೃದ್ಧಿ ಹಾಗೂ ಬೇರು ಮತ್ತು ಗೆಡ್ಡೆ ಬೆಳೆ ಯೋಜನೆ ಮುಂತಾದ ಇತರ ಯೋಜನೆಗಳು ಸಹ ಅನುಷ್ಠಾನಗೊಳ್ಳುತ್ತಿವೆ.

ಜಿಲ್ಲಾ ತೋಟದ ಬೆಳೆಗಾರರ ಉತ್ಪನ್ನಗಳ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘವು ೧೯೮೨ ರಿಂದ ನೋಂದಣಿಗೊಂಡು ಕಾರ್ಯನಿರ್ವಹಿಸುತ್ತಿದೆ. ಸಂಘದ ವತಿಯಿಂದ ಮಾರಾಟ ಮಳಿಗೆಗಳನ್ನು ತೆರೆದಿದ್ದು, ಸಾರ್ವಜನಿಕರಿಗೆ ಹಾಗೂ ಸಾರ್ವಜನಿಕ ವಿದ್ಯಾರ್ಥಿನಿಲಯಗಳಿಗೆ ಹಣ್ಣು-ತರಕಾರಿಗಳನ್ನು ಪೂರೈಸಲಾಗುತ್ತಿದೆ.

## ನಗರಾಭಿವೃದ್ಧಿ ಪ್ರಾಧಿಕಾರ, ಮಂಡ್ಯ

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ ೧೯೮೭ರ ರೀತ್ಯಾ ೧೯೮೮ರಲ್ಲಿ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರವು ಮಂಡ್ಯದಲ್ಲಿ ಸ್ಥಾಪನೆಗೊಂಡಿತು. ಮಂಡ್ಯ ನಗರ ಹಾಗೂ ೧೮ ಗ್ರಾಮಗಳ ೬೧.೭೯ ಚ.ಕಿ.ಮೀ. ಕ್ಷೇತ್ರ ವ್ಯಾಪ್ತಿಯನ್ನು ಈ ಪ್ರಾಧಿಕಾರ ಹೊಂದಿದ್ದು, ಬಡಾವಣೆಗಳನ್ನು ರಚಿಸಿ, ನಿವೇಶನಗಳನ್ನು ಹಂಚುವ ಉದ್ದೇಶ ಹೊಂದಿದೆ. ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರದ ಮುಖ್ಯಾಧಿಕಾರಿಯಾಗಿದ್ದು ಅಧಿಕಾರಿಗಳು ಹಾಗೂ ಅಧಿಕಾರೇತರರು ಸೇರಿದಂತೆ ಒಟ್ಟು ೨೦ ಸದಸ್ಯರನ್ನು ಹೊಂದಿದೆ. ಬಡಾವಣೆಗಳನ್ನು ರಚಿಸಿ ನಿವೇಶನಗಳನ್ನು ಹಂಚುವುದರ ಜೊತೆಗೆ, ಕಟ್ಟಡಗಳಿಗೆ ಆರಂಭದ ಧೃಢೀಕರಣ ಪತ್ರ ನೀಡುವುದು, ಖಾಸಗಿ ಬಡಾವಣೆಗಳ ಅನುಮೋದನೆ, ಹಸಿರುಪಟ್ಟಿ ವಲಯ ಕಾಪಾಡುವುದು, ಭೂ ಉಪಯೋಗದ ಬಗ್ಗೆ ವ್ಯಾಪಕಾಭಿವೃದ್ಧಿ ಯೋಜನೆಗಳ ಪರಿಷ್ಕರಣೆ ಮುಂತಾದವು ಪ್ರಾಧಿಕಾರದ ಕಾರ್ಯಚಟುವಟಿಕೆಗಳಾಗಿವೆ.

## ಪದವಿ ಪೂರ್ವ ಮತ್ತು ವೃತ್ತಿ ಶಿಕ್ಷಣ ಇಲಾಖೆ

ಪದವಿ ಪೂರ್ವ ಮತ್ತು ವೃತ್ತಿ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಚೇರಿಯು ಮಂಡ್ಯದಲ್ಲಿ ೧೯೬೭ರಲ್ಲಿ ಪ್ರಾರಂಭಗೊಂಡಿತು. ಮಂಡ್ಯ ಜಿಲ್ಲೆಯ ೬೯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳು, ಪದವಿ ಕಾಲೇಜುಗಳಿಂದ

ಬೇರ್ಪಡಿಸಿದ ೦೫ ಪದವಿಪೂರ್ವ ಕಾಲೇಜುಗಳು, ೧೦ ಅನುದಾನಸಹಿತ ಹಾಗೂ ೩೦ ಅನುದಾನ ರಹಿತ ಖಾಸಗಿ ಪದವಿ ಪೂರ್ವ ಕಾಲೇಜುಗಳು ಈ ಕಚೇರಿಯ ಅಧಿಕಾರ ವ್ಯಾಪ್ತಿಗೆ ಒಳಪಡುತ್ತವೆ. ಈ ಕೆಲವು (೩೪) ಕಾಲೇಜುಗಳಲ್ಲಿ ವೃತ್ತಿ ಶಿಕ್ಷಣ (ಜೆ.ಒ.ಸಿ) ಬೋಧನೆಯೂ ಇರುತ್ತದೆ. ಈ ಎಲ್ಲಾ ಕಾಲೇಜುಗಳ ತಪಾಸಣೆ, ಪದವಿ ಪೂರ್ವ ಮತ್ತು ವೃತ್ತಿ ಶಿಕ್ಷಣ ಪಠ್ಯ ಮತ್ತು ಸಹ ಪಠ್ಯ ಚಟುವಟಿಕೆಗಳ ಮೇಲ್ವಿಚಾರಣೆ, ಪರೀಕ್ಷಾ ಕಾರ್ಯ, ಕ್ರೀಡಾ ಚಟುವಟಿಕೆಗಳ ಮೇಲ್ವಿಚಾರಣೆ, ದೈಹಿಕ ಶಿಕ್ಷಣ, ಗ್ರಂಥಾಲಯ ಹಾಗೂ ಕಾಲೇಜು ಕಟ್ಟಡಗಳ ಬಗ್ಗೆ ಇರುವ ಕುಂದು ಕೊರತೆಗಳನ್ನು ನಿವಾರಿಸಲು ಮೇಲಧಿಕಾರಿಗಳಿಗೆ ತಿಳಿಸುವುದು ಈ ಕಚೇರಿಯ ಕಾರ್ಯಜವಾಬ್ದಾರಿಗಳಾಗಿವೆ. ಇಲಾಖೆಯು ನಿಗದಿಪಡಿಸುವ ಇತರ ಯೋಜನೆ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಸಹ ಇದು ಕಾರ್ಯರೂಪಗೊಳಿಸುತ್ತಿದೆ. ಉಪನಿರ್ದೇಶಕರು ಈ ಕಚೇರಿಯ ಮುಖ್ಯಸ್ಥರಾಗಿದ್ದು, ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಹಾಗೂ ನಿರ್ದೇಶಕರು, ವೃತ್ತಿ ಶಿಕ್ಷಣ ನಿರ್ದೇಶನಾಲಯ ಅವರ ನಿಯಂತ್ರಣಕ್ಕೆ ಒಳಪಡುತ್ತಾರೆ.

**ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ**

ಜಿಲ್ಲೆಯಲ್ಲಿ ಪಶು ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ ಹಾಗೂ ಆಡಳಿತ ನಿರ್ವಹಣಾ ದೃಷ್ಟಿಯಿಂದ ಮಂಡ್ಯದಲ್ಲಿ ಪಶುಪಾಲನಾ ಮತ್ತು ಪಶು ವೈದ್ಯ ಸೇವೆಗಳ ಜಿಲ್ಲಾ ಮಟ್ಟದ ಕಚೇರಿಯು ೧೯೭೫ರಿಂದ ಹಿರಿಯ ಸಹಾಯಕ ನಿರ್ದೇಶಕರ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದಿತು. ಪ್ರಸ್ತುತ, ಉಪನಿರ್ದೇಶಕರು ಆಡಳಿತಾಧಿಕಾರಿಯಾಗಿದ್ದು, ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವರು. ಅವರ ನೆರವಿಗೆ ೨೫ ಜನ ಸಹಾಯಕ ನಿರ್ದೇಶಕರು, ೯೦ ಜನ ಪಶು ವೈದ್ಯಾಧಿಕಾರಿಗಳು, ನಾಲ್ಕು ಜನ ಪಶು ವೈದ್ಯಕೀಯ ಮೇಲ್ವಿಚಾರಕರು, ೧೦೨ ಜನ ಹಿರಿಯ ಪಶುವೈದ್ಯಕೀಯ ಪರೀಕ್ಷಕರು, ೮೯ ಜನ ಪಶು ವೈದ್ಯಕೀಯ ಪರೀಕ್ಷಕರು, ೧೩೯ ಜನ ಪಶು ವೈದ್ಯಕೀಯ ಸಹಾಯಕರು ಹಾಗೂ ಇನ್ನಿತರ ೭೪೬ ಸಿಬ್ಬಂದಿಗಳಿದ್ದಾರೆ.

ಜಾನುವಾರುಗಳಿಗೆ ರೋಗರುಜಿನಗಳಿಂದ ರಕ್ಷಣೆ, ಪಶುಸಂಪತ್ತು ಹಾಗೂ ಪಶು ಸಂತತಿಯ ಅಭಿವೃದ್ಧಿ, ಕೃತಕ ಗರ್ಭಧಾರಣೆ ಮೂಲಕ ಸುಧಾರಿತ ತಳಿಗಳ ಅಭಿವೃದ್ಧಿ, ಇಲಾಖೆಗಳಿಗೆ ಸಂಬಂಧಿಸಿದ ಸಾಮಾಜಿಕ ಹಾಗೂ ಆರ್ಥಿಕ ಯೋಜನೆಗಳ ಅನುಷ್ಠಾನ, ಮೇವು ಅಭಿವೃದ್ಧಿ, ಪಶು ಆಹಾರ ಅಭಿವೃದ್ಧಿ, ಬರಡು ರಾಸುಗಳ ಚಿಕಿತ್ಸಾ ಶಿಬಿರ, ಸಂಚಾರಿ ಪಶು ಚಿಕಿತ್ಸಾ ಸೌಲಭ್ಯ ಮುಂತಾದವು ಈ ಕಚೇರಿಯ ಪ್ರಧಾನ ಚಟುವಟಿಕೆಗಳಾಗಿವೆ.

ಪಾಂಡವಪುರ, ಶ್ರೀರಂಗಪಟ್ಟಣ, ನಾಗಮಂಗಲ, ಮಳವಳ್ಳಿ, ಮಂಡ್ಯ, ಮದ್ದೂರು, ಕೆರೆಗೋಡು, ಕೊಡಿಯಾಲ, ಮೇಲುಕೋಟೆ, ಭಾರತೀನಗರ, ಬೆಸಗರಹಳ್ಳಿ, ಆದಿಚುಂಚನಗಿರಿ, ಕ್ಯಾತೆಗೌಡನದೊಡ್ಡಿ, ನೆಲ್ಲಿಗೆರೆ, ಕಿರುಗಾವಲು, ಶೀಳನೆರೆ, ಕೀಲಾರ, ಬೆಳಕವಾಡಿ ಮತ್ತು ಕಿಕ್ಕೇರಿಗಳಲ್ಲಿ ಅಧೀನ ಕಚೇರಿಗಳಿದ್ದು ಅವು ಸಹಾಯಕ ನಿರ್ದೇಶಕರ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿವೆ. ಇವಲ್ಲದೆ, ನಾಗಮಂಗಲದಲ್ಲಿ ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನಾ ಕಚೇರಿ, ಮಂಡ್ಯದಲ್ಲಿ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ಮಂಡಳಿ ಕಚೇರಿ ಹಾಗೂ ಮಳವಳಿಯಲ್ಲಿ ಪ್ರಧಾನ ಗ್ರಾಮೀಣ ಅಭಿವೃದ್ಧಿ ಯೋಜನೆ, ಬಂಡೂರು ಕುರಿ ತಳಿ ಅಭಿವೃದ್ಧಿ ಯೋಜನೆ ಕಛೇರಿಗಳಿದ್ದು, ಅವು ಸಹಾಯಕ ನಿರ್ದೇಶಕರ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿವೆ.

**ಪ್ರಾದೇಶಿಕ ಸಾರಿಗೆ ಇಲಾಖೆ**

ಪ್ರಾದೇಶಿಕ ಸಾರಿಗೆ ಅಧಿಕಾರಿ ಅವರ ಕಚೇರಿಯು ಮಂಡ್ಯದಲ್ಲಿ ೧೯೫೮ರಿಂದ ಕಾರ್ಯಾರಂಭಮಾಡಿದೆ. ಪ್ರಾದೇಶಿಕ ಸಾರಿಗೆ ಅಧಿಕಾರಿಯು ಈ ಕಚೇರಿಯ ಮುಖ್ಯಾಧಿಕಾರಿಯಾಗಿದ್ದು, ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ

ಹೊಂದಿರುತ್ತಾರೆ. ಅವರ ನೆರವಿಗೆ ಒಬ್ಬ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ, ಇಬ್ಬರು ಹಿರಿಯ ಮೋಟಾರು ವಾಹನ ನಿರೀಕ್ಷಕರು, ಏಳು ಜನ ಮೋಟಾರು ವಾಹನ ನಿರೀಕ್ಷಕರು ಹಾಗೂ ಇನ್ನಿತರ ೩೨ ಜನರ ಸಿಬ್ಬಂದಿ ವರ್ಗವಿದೆ.

ಮೋಟಾರು ವಾಹನ ನೋಂದಣಿ, ರಾಜ್ಯ ಸರ್ಕಾರಕ್ಕೆ ಮೋಟಾರುವಾಹನಗಳ ತೆರಿಗೆ ಸಂಗ್ರಹಣೆ, ವಾಹನ ಚಾಲಕ ಮತ್ತು ನಿರ್ವಾಹಕರ ಲೈಸನ್ಸ್ ನೀಡಿಕೆ, ಸಾರಿಗೆ ವಾಹನಗಳಿಗೆ ರಹದಾರಿ ಮಂಜೂರಾತಿ ಹಾಗೂ ಕೇಂದ್ರ ಮೋಟಾರು ವಾಹನ ಕಾಯ್ದೆ ೧೯೮೮ರ ಅಡಿಯ ನಿಯಮಾವಳಿಗಳ ರೀತ್ಯ ಇನ್ನಿತರ ಕಾರ್ಯಗಳನ್ನೂ ಈ ಕಚೇರಿಯು ನಿರ್ವಹಿಸುತ್ತದೆ. ಕರ್ನಾಟಕ ಮೋಟಾರು ವಾಹನ ತೆರಿಗೆ ಕಾಯಿದೆ ೧೯೫೭, ಮೋಟಾರು ವಾಹನಗಳ ಕಾಯ್ದೆ ೧೯೮೮, ಕೇಂದ್ರ ಮೋಟಾರು ವಾಹನ ನಿಯಮಾವಳಿಗಳು ೧೯೮೯, ಕರ್ನಾಟಕ ಮೋಟಾರು ವಾಹನ ನಿಯಮಾವಳಿಗಳು ೧೯೮೯ ಇತ್ಯಾದಿಗಳನ್ನು ಕಚೇರಿ ತನ್ನ ಕಾರ್ಯನಿರ್ವಹಣೆಯಲ್ಲಿ ಅಳವಡಿಸಿಕೊಳ್ಳುತ್ತದೆ.

## ಪೊಲೀಸ್ ಇಲಾಖೆ

ಜಿಲ್ಲೆಯಲ್ಲಿ ಕಾನೂನು ಹಾಗೂ ಸುವ್ಯವಸ್ಥೆ ಕಾಪಾಡುವುದು ಮತ್ತು ಅಪರಾಧಗಳ ತಡೆಗಟ್ಟುವಿಕೆಯ ಉದ್ದೇಶದಿಂದ ಪೊಲೀಸ್ ಸೂಪರಿಂಟೆಂಡೆಂಟರವರ ಕಚೇರಿಯು ಮಂಡ್ಯದಲ್ಲಿ ೧೯೫೯ರಲ್ಲಿ ಕಾರ್ಯಾರಂಭ ಮಾಡಿತು. ಅದಕ್ಕೂ ಮೊದಲು ಇದು ಮಂಡ್ಯ ಜಿಲ್ಲಾಧಿಕಾರಿಯವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದಿತು. ಕಚೇರಿಯ ಮುಖ್ಯಾಧಿಕಾರಿಯಾದ ಜಿಲ್ಲಾ ಪೊಲೀಸ್ ಅಧೀಕ್ಷಕರು ಜಿಲ್ಲೆಯಾದ್ಯಂತ ತಮ್ಮ ಅಧಿಕಾರ ವ್ಯಾಪ್ತಿ ಹೊಂದಿರುತ್ತಾರೆ. ಇವರ ಅಧೀನದಲ್ಲಿ ಒಬ್ಬರು ಸಹಾಯಕ ಆಡಳಿತಾಧಿಕಾರಿ ಹಾಗೂ ಇನ್ನಿತರ ೩೩ ಜನರ ಸಿಬ್ಬಂದಿ ವರ್ಗವಿದೆ. ಇದೇ ಕಛೇರಿಯ ಆಡಳಿತ ವ್ಯವಸ್ಥೆಯಲ್ಲಿ ಅಪರ ಪೋಲೀಸ್ ಅಧೀಕ್ಷಕರು ಮತ್ತಿತರ ಅಧಿಕಾರಿಗಳೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಭಾರತದ ದಂಡ ಸಂಹಿತೆ, ಅಪರಾಧ ದಂಡ ಸಂಹಿತೆ, ಸ್ಪೆಶಲ್ ಅಂಡ್ ಲೋಕಲ್ ಲಾಸ್, ಪೊಲೀಸ್ ಮಾನ್ಯುಯಲ್, ಇ.ಸಿ.ಆಕ್ಟ್, ವರದಕ್ಷಿಣೆ ನಿಷೇಧ ಕಾಯ್ದೆ, ಪಿ.ಸಿ.ಆರ್.ಕಾಯ್ದೆ, ಕರ್ನಾಟಕ ಪೊಲೀಸು ಕಾಯ್ದೆ ೧೯೬೩ ಮುಂತಾದ ಅಧಿನಿಯಮ, ನಿಯಮಗಳನ್ನು ಈ ಕಚೇರಿ ತನ್ನ ಕಾರ್ಯನಿರ್ವಹಣೆಯಲ್ಲಿ ಅನ್ವಯಗೊಳಿಸಿಕೊಳ್ಳುತ್ತದೆ. ತಾಲೂಕುಮಟ್ಟದಲ್ಲಿ ಅಧೀನ ಕಾರ್ಯಾಲಯಗಳಾದ ಉಪವಿಭಾಗೀಯ/ವೃತ್ತ ಕಚೇರಿಗಳು, ಪೊಲೀಸ್ ಠಾಣೆಗಳು ಹಾಗೂ ಹೊರ ಠಾಣೆಗಳಿವೆ. ಅಲ್ಲದೇ ಜಿಲ್ಲಾ ಗುಪ್ತ ವಾರ್ತೆ ವಿಭಾಗ, ಜಿಲ್ಲಾ ಅಪರಾಧ ದಾಖಲಾತಿ ವಿಭಾಗ, ಜಿಲ್ಲಾ ವೈಜ್ಞಾನಿಕ ಘಟಕ, ರಾಷ್ಟ್ರೀಯ ಹೆದ್ದಾರಿ ಘಟಕ, ಏಕಬೆರಳು ಮುದ್ರಾ ಘಟಕ, ಜಿಲ್ಲಾ ನಿಸ್ತಂತು ವಿಭಾಗ ಹಾಗೂ ಜಿಲ್ಲಾ ಸಶಸ್ತ್ರ ಮೀಸಲು ಪಡೆಗಳೂ ಇವರ ಆಡಳಿತ ವ್ಯಾಪ್ತಿಯಲ್ಲಿವೆ. ಸಂಚಾರ ನಿಯಂತ್ರಣದ ಬಗ್ಗೆ ಸಂಚಾರಿ ನಿಯಮಗಳನ್ನು ಪಾಲಿಸಲು ಸಭೆಗಳನ್ನು ನಡೆಸುವುದು, 'ಅಪರಾಧ ತಡೆ ' ಮಾಸಾಚರಣೆ, ಅಪರಾಧ ತಡೆ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಉಂಟು ಮಾಡಲು ಕರಪತ್ರ ಹೊರಡಿಸುವಿಕೆ, ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಣೆ ಹಾಗೂ ಚಿತ್ರಮಂದಿರಗಳಲ್ಲಿ ಸ್ಲೈಡ್‌ಗಳ ಪ್ರದರ್ಶನ ಮುಂತಾದ ವಿಶೇಷ ಕಾರ್ಯಚಟುವಟಿಕೆಗಳನ್ನೂ ಈ ಕಚೇರಿ ನಡೆಸುತ್ತದೆ. ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ದಕ್ಷಿಣ ವಲಯ, ಮೈಸೂರು ಇವರು ಮೇಲಧಿಕಾರಿಯಾಗಿದ್ದಾರೆ.

## ಭೂ ಮಾಪನ ಹಾಗೂ ಭೂ ದಾಖಲೆಗಳ ಇಲಾಖೆ

ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಮಂಡ್ಯ ಉಪವಿಭಾಗ ಕಚೇರಿಯು ಮಂಡ್ಯದಲ್ಲಿ ೧೯೭೯ರಿಂದ ಕಾರ್ಯನಿರ್ವಹಿಸುತ್ತಿದೆ. ಅದಕ್ಕೂ ಪೂರ್ವದಲ್ಲಿ ೧೯೩೮ ರಷ್ಟು ಹಿಂದೆಯೇ ಈ ಕಚೇರಿಯು ಜಿಲ್ಲಾ ಸರ್ವೆ ಆಫೀಸ್ ಎಂಬ ಹೆಸರಿನಿಂದ ಪ್ರಾರಂಭಗೊಂಡಿತ್ತು. ತದನಂತರದಲ್ಲಿ ಇದು ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆಫ್

ಲ್ಯಾಂಡ್ ರೆಕಾರ್ಡ್ಸ್ ಎಂದು ನಾಮಕರಣಗೊಂಡಿತು. ಪ್ರಸ್ತುತ ಈಗಿರುವಂತೆ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಎಂದು ಪುನರ್ ನಾಮಕರಣ ಪಡೆಯಿತು. ಈ ಕಚೇರಿಯು ಮಂಡ್ಯ, ಮದ್ದೂರು, ಮಳವಳ್ಳಿ ತಾಲೂಕುಗಳ ಆಡಳಿತ ವ್ಯಾಪ್ತಿ ಪಡೆದಿದ್ದು, ಆಯಾ ತಾಲೂಕಿನಲ್ಲಿರುವ ತಾಲೂಕು ಭೂ ಮಾಪನ ಕಚೇರಿಯ ಉಸ್ತುವಾರಿಯನ್ನು ಭೂ ಮಾಪನಾಧಿಕಾರಿಗಳು ನೋಡಿಕೊಳ್ಳುತ್ತಾರೆ. ಜಿಲ್ಲೆಯ ಇತರ ನಾಲ್ಕು ತಾಲೂಕುಗಳು ಪಾಂಡವಪುರ ಉಪವಿಭಾಗ ಕಚೇರಿಗೆ ಒಳಪಡುತ್ತಿದ್ದು, ಸಹಾಯಕ ನಿರ್ದೇಶಕರು ಅದರ ಮುಖ್ಯಾಧಿಕಾರಿಯಾಗಿದ್ದು, ಅವರ ನೆರವಿಗೆ ೧೪೭ ಜನ ಇತರ ಸಿಬ್ಬಂದಿ ಇದ್ದಾರೆ. ಭೂಮಿಗೆ ಸಂಬಂಧಪಟ್ಟಂತೆ ಅಳತೆ, ಭೂ ಮಂಜೂರಾತಿ, ಭೂ ಪರಿವರ್ತನೆ, ಭೂಸ್ವಾಧೀನ, ಹಕ್ಕು ಬದಲಾವಣೆ, ಭೂಸುಧಾರಣೆ, ಪೋಡಿ ಕಡತಗಳ ಅಳತೆ, ನಕ್ಷೆ, ಕಂದಾಯ ಹಂಚುವಿಕೆ ಮುಂತಾದ ಕಾರ್ಯ ಚಟುವಟಿಕೆಗಳನ್ನು ಈ ಕಾರ್ಯಾಲಯವು ನಿರ್ವಹಿಸುತ್ತದೆ.

ಕರ್ನಾಟಕ ನಾಗರಿಕ ಸೇವಾ ನಿಯಮಗಳೊಂದಿಗೆ, ಸರ್ವೆ ಮ್ಯಾನುಅಲ್ (ಮೋಜಣಿ ಕೈಪಿಡಿ) ಹಾಗೂ ಕಾಲಕಾಲಕ್ಕೆ ನಿರ್ದೇಶಕರು ಹೊರಡಿಸುವ ನಿಯಮಾವಳಿಗಳನ್ನೂ ಈ ಕಚೇರಿ ತನ್ನ ಕಾರ್ಯನಿರ್ವಹಣೆಯಲ್ಲಿ ಅಳವಡಿಸಿಕೊಳ್ಳುತ್ತಿದೆ.

## ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಮಹಿಳೆಯರ ಮತ್ತು ಮಕ್ಕಳ ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ದೃಷ್ಟಿಯಿಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಜಿಲ್ಲಾ ಕಚೇರಿಯು ಮಂಡ್ಯದಲ್ಲಿ ೧೯೮೪ರಲ್ಲಿ ಆರಂಭಗೊಂಡಿದ್ದು, ಸಂಪೂರ್ಣ ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವ ಸಹಾಯಕ ನಿರ್ದೇಶಕರು ಕಚೇರಿಯ ಮುಖ್ಯಾಧಿಕಾರಿಯಾಗಿರುತ್ತಾರೆ. ಇವರ ನೆರವಿಗೆ ಒಬ್ಬ ನಿರೂಪಣಾಧಿಕಾರಿ (ಶಿಶು ಅಭಿವೃದ್ಧಿ ಯೋಜನೆ ಉಸ್ತುವಾರಿ), ಒಬ್ಬ ವಿಶೇಷ ಪೌಷ್ಠಿಕ ಆಹಾರ ನಿರೀಕ್ಷಕ ಹಾಗೂ ಇನ್ನಿತರ ೧೬ ಜನರ ಸಿಬ್ಬಂದಿ ವರ್ಗವಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳ ಜಾರಿಗೊಳಿಸುವಿಕೆ, ಆರು ತಿಂಗಳಿಂದ ಆರು ವರ್ಷದವರೆಗಿನ ಮಕ್ಕಳ ಬೆಳವಣಿಗೆಗೆ ಪೌಷ್ಠಿಕ ಆಹಾರ ಕಾರ್ಯಕ್ರಮ, ಗರ್ಭಿಣಿ, ಬಾಣಂತಿಯರ ಆರೈಕೆ, ಚುಚ್ಚುಮದ್ದು ಕಾರ್ಯಕ್ರಮ, ಶಾಲಾಪೂರ್ವ ಶಿಕ್ಷಣ, ಬಾಲ್ಯ ವಿವಾಹ, ವರದಕ್ಷಿಣೆ ಹಾಗೂ ದೇವದಾಸಿ ಪದ್ಧತಿಯ ವಿರುದ್ಧ ಸರ್ಕಾರದ ಕಾರ್ಯಕ್ರಮ ಜಾರಿಗೊಳಿಸುವುದು, ಶಿಶುಪಾಲನಾ ಕೇಂದ್ರ, ನಿರ್ಗತಿಕರ ಕುಟೀರ, ಬಾಲಕಾರ್ಮಿಕರ ಪುನರ್ವಸತಿ, ವೃದ್ಧಾಶ್ರಮ, ಅನಾಥಾಶ್ರಮ ಹಾಗೂ ಹೆಣ್ಣುಮಕ್ಕಳ ಅಭಿವೃದ್ಧಿಗಾಗಿ ಪ್ರಗತಿಪರ ಕಾರ್ಯಕ್ರಮ ಜಾರಿಗೊಳಿಸುವುದು ಈ ಕಚೇರಿಯ ಪ್ರಮುಖ ಕಾರ್ಯಚಟುವಟಿಕೆಗಳಾಗಿವೆ. ಬಾಲಿಕಾ ಸಮೃದ್ಧಿ, ನವಜೀವನ, ಸ್ವಶಕ್ತಿ, ಹೆಣ್ಣುಮಕ್ಕಳ ಹಾಜರಾತಿ ವಿದ್ಯಾರ್ಥಿವೇತನ, ಸಂಕಷ್ಟ ಪರಿಸ್ಥಿತಿಯಲ್ಲಿಯ ಮಕ್ಕಳಿಗೆ ಸಹಾಯಧನ, ರಾಷ್ಟ್ರೀಯ ಹೆರಿಗೆ ಭತ್ಯೆ ಯೋಜನಾ ಕಾರ್ಯಕ್ರಮ, ಅಂಗವಿಕಲ ಯೋಜನಾ ಕಾರ್ಯಕ್ರಮಗಳೊಂದಿಗೆ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಕಾರ್ಯಕ್ರಮಗಳನ್ನೂ ಈ ಕಚೇರಿ ಜಾರಿಗೊಳಿಸುತ್ತಿದೆ.

## ಮಂಡ್ಯ ಜಿಲ್ಲಾ ಸಹಕಾರ ಕೃಷಿ ಉತ್ಪನ್ನಗಳ ಮಾರಾಟ ಒಕ್ಕೂಟ ನಿಯಮಿತ

ರೈತರಿಗೆ ರಸಗೊಬ್ಬರ, ಕ್ರಿಮಿನಾಶಕ ಮತ್ತು ಕೃಷಿಗೆ ಸಂಬಂಧಿಸಿದ ಇತರೆ ವಸ್ತುಗಳನ್ನು ಪ್ರಾಥಮಿಕ ಸಹಕಾರ ಸಂಘಗಳ ಮೂಲಕ ಸರಬರಾಜು ಮಾಡುವ ಉದ್ದೇಶದಿಂದ ಮಂಡ್ಯದಲ್ಲಿ ಜಿಲ್ಲಾ ಸಹಕಾರ ಕೃಷಿ ಉತ್ಪನ್ನಗಳ ಮಾರಾಟ ಒಕ್ಕೂಟ ನಿಯಮಿತದ ಕಚೇರಿಯು ೧೯೭೮ರಲ್ಲಿ ಪ್ರಾರಂಭಗೊಂಡಿದೆ. ವ್ಯವಸ್ಥಾಪಕ ನಿರ್ದೇಶಕರು ಈ ಒಕ್ಕೂಟದ ಮುಖ್ಯಾಧಿಕಾರಿಯಾಗಿದ್ದು ಅವರ ಅಧಿಕಾರ ವ್ಯಾಪ್ತಿಯು ಸಂಪೂರ್ಣ ಮಂಡ್ಯ ಜಿಲ್ಲೆಯನ್ನೊಳಗೊಂಡಿದೆ. ಅವರ ನೆರವಿಗೆ ಇಬ್ಬರು ಇತರ ಸಿಬ್ಬಂದಿ ಇದ್ದಾರೆ. ಪ್ರಸ್ತುತ ರಸಗೊಬ್ಬರದ ಮಾರಾಟ ಈ ಕಾರ್ಯಾಲಯದ ಮುಖ್ಯ

ಕಾರ್ಯಚಟುವಟಿಕೆಯಾಗಿದೆ. ಸಹಕಾರ ಸಂಘಗಳಿಗೆ ಸಂಬಂಧಿಸಿದ ಅಧಿನಿಯಮ ಹಾಗೂ ನಿಯಮಗಳನ್ನು ಈ ಕಚೇರಿ ತನ್ನ ಕೆಲಸಕಾರ್ಯಗಳಲ್ಲಿ ಅನ್ವಯಗೊಳಿಸುತ್ತಿದೆ.

**ಮೀನುಗಾರಿಕೆ ಇಲಾಖೆ**

ಜಿಲ್ಲೆಯ ಉತ್ತಮ ಜಲಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಮೀನು ಕೃಷಿಯನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಮೀನುಗಾರಿಕೆಯ ಹಿರಿಯ ಸಹಾಯಕ ನಿರ್ದೇಶಕರ ಕಚೇರಿಯು ಮಂಡ್ಯದಲ್ಲಿ ೧೯೭೫ ರಿಂದ ಕಾರ್ಯಾರಂಭಮಾಡಿದೆ. ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುವ ಹಿರಿಯ ಸಹಾಯಕ ನಿರ್ದೇಶಕರು, ಎಂಟು ಜನ ಸಹಾಯಕ ನಿರ್ದೇಶಕರು ಹಾಗೂ ಇತರ ಸಿಬ್ಬಂದಿಯೊಂದಿಗೆ ಕಾರ್ಯನಿರ್ವಹಿಸುತ್ತಿದ್ದಾರೆ.

ಜಿಲ್ಲೆಯಲ್ಲಿನ ದೊಡ್ಡ ಹಾಗೂ ಸಣ್ಣ ಕೆರೆಗಳ ಅಭಿವೃದ್ಧಿ, ತಾಂತ್ರಿಕವಾಗಿ ಹಾಗೂ ಸಾಂದ್ರೀಯವಾಗಿ ಮೀನು ಕೃಷಿ ಕೈಗೊಳ್ಳಲು ತಿಳಿವಳಿಕೆ ನೀಡುವುದು ಈ ಕಚೇರಿಯ ಮುಖ್ಯ ಕಾರ್ಯಚಟುವಟಿಕೆಗಳಾಗಿವೆ. ಮೀನುಮರಿ ಉತ್ಪಾದನೆ, ಪಾಲನೆ ಮತ್ತು ವಿತರಣೆ, ಮೀನು ಕೊಳ ನಿರ್ಮಾಣಕ್ಕೆ ಸಹಾಯಧನ, ವಸ್ತು ಪ್ರದರ್ಶನ ಮತ್ತು ತರಬೇತಿ, ಮೀನು ಉತ್ಪಾದನಾ ಕೇಂದ್ರಗಳ ಸ್ಥಾಪನೆ, ಹುಲ್ಲುಗೆಂಡೆ ಮೀನುಮರಿ ಬಿತ್ತನೆಗೆ ಸಹಾಯಧನ, ಮೀನುಗಾರಿಕೆ ಉಪಕರಣಗಳಿಗೆ ಸಹಾಯಧನ, ಶೀಥಿಲೀಕರಣ ಘಟಕಗಳ ಸ್ಥಾಪನೆ ಮುಂತಾದ ಯೋಜನೆಗಳನ್ನು ಈ ಕಚೇರಿಯು ಕಾರ್ಯಗತಗೊಳಿಸುತ್ತಿದೆ. ಮೀನುಗಾರಿಕೆಯ ಸಹಾಯಕ ನಿರ್ದೇಶಕರ ಕಚೇರಿಗಳು ತಾಲೂಕುಮಟ್ಟದಲ್ಲಿ ಮೀನುಗಾರಿಕೆ ಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದು, ಸಹಾಯಕ ನಿರ್ದೇಶಕರ ನೆರವಿಗೆ ಮೀನುಗಾರಿಕೆ ಕ್ಷೇತ್ರಪಾಲರು ಹಾಗೂ ಮೀನುಗಾರಿಕೆ ಮೇಲ್ವಿಚಾರಕರೂ ಇರುತ್ತಾರೆ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮಂಡ್ಯ ಇವರು ಮೇಲಧಿಕಾರಿಯಾಗಿದ್ದಾರೆ.

**ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ**

ಜಿಲ್ಲಾ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಗಳ ಕಚೇರಿಯು ಮಂಡ್ಯದಲ್ಲಿ ೧೯೭೫ರಲ್ಲಿ ಪ್ರಾರಂಭಗೊಂಡಿತು. ಆಗ ಅದು ಜಿಲ್ಲಾ ಯೋಜನಾಧಿಕಾರಿಗಳ ಹತೋಟಿಯಲ್ಲಿದ್ದಿತು. ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಯು ಈ ಕಚೇರಿಯ ಮುಖ್ಯಾಧಿಕಾರಿಯಾಗಿದ್ದು, ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವರು. ಗ್ರಾಮೀಣ ಯುವಕರಲ್ಲಿ ಕ್ರೀಡಾಭಿಮಾನ ಬೆಳೆಸಿ ಕ್ರೀಡಾಭಿವೃದ್ಧಿಗೆ ಉತ್ತೇಜನ ನೀಡುವುದು ಈ ಕಾರ್ಯಾಲಯದ ಮುಖ್ಯ ಉದ್ದೇಶವಾಗಿದೆ. ಜಿಲ್ಲೆಯಲ್ಲಿ ಜಿಲ್ಲಾಮಟ್ಟದ ಕ್ರೀಡಾಕೂಟ, ದಸರಾ ಕ್ರೀಡಾಕೂಟ, ಗ್ರಾಮಾಂತರ ಕ್ರೀಡಾ ಕೂಟ, ಮಹಿಳಾ ಕ್ರೀಡಾಕೂಟ, ಯುವಜನಮೇಳ, ಬೇಸಿಗೆ ತರಬೇತಿ ಶಿಬಿರ ಹಾಗೂ ಸರ್ಕಾರಿ ನೌಕರರ ಕ್ರೀಡಾ ಕೂಟಗಳನ್ನು ಪ್ರತಿ ವರ್ಷ ಕಾಲಕಾಲಕ್ಕೆ ನಡೆಸುವುದು ಈ ಕಚೇರಿಯ ಜವಾಬ್ದಾರಿಗಳಾಗಿವೆ. ಜಿಲ್ಲಾ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿ ಅವರ ನೆರವಿಗೆ ಮೂರು ಜನ ಸಿಬ್ಬಂದಿ ಇದ್ದಾರೆ. ಈ ಕಾರ್ಯಾಲಯವು ಜಿಲ್ಲಾ ಪಂಚಾಯತ್ ಆಡಳಿತ ವ್ಯಾಪ್ತಿಗೆ ಒಳಪಟ್ಟಿದ್ದು ಗ್ರಾಮಾಂತರ ಪ್ರದೇಶಗಳಲ್ಲಿ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುವುದು, ಯುವಜನರನ್ನು ಸಂಘಟಿಸುವುದು, ಯುವಸಂಘಗಳ ಸ್ಥಾಪನೆ, ಯುವಜನ ಕಾರ್ಯಕ್ರಮದಡಿ ಯುವ ಮುಂದಾಳತ್ವದ ಬಗ್ಗೆ ತರಬೇತಿ ನೀಡುವುದು, ಯುವ ಪ್ರೇರಣಾ, ಯುವಚೇತನ, ಯುವ ಸಂಮೋಹನ ತರಬೇತಿ ಶಿಬಿರಗಳು ಮತ್ತು ಸಾಹಸ ಕಾರ್ಯಕ್ರಮಗಳನ್ನು ನಡೆಸುವುದು ಮುಂತಾದವು ಈ ಕಚೇರಿಯ ಇತರ ಚಟುವಟಿಕೆಗಳಾಗಿವೆ.

ಯುವಜನ ಸಂಘಗಳ ಸ್ಥಾಪನೆ, ಗ್ರಾಮ ಗರಡೀ ಮನೆ ನಿರ್ಮಾಣ ಮತ್ತು ಅಂಗ ಸಾಧಕರಿಗೆ ವಿದ್ಯಾರ್ಥಿ ವೇತನ, ಆಟದ ಮೈದಾನಗಳಿಗೆ ಹೊನಲು ದೀಪ ಹಾಗೂ ಇತರ ಸುಧಾರಿತ ಸಾಧನಗಳ ಪೂರೈಕೆ, ಕ್ರೀಡಾಕೂಟ

ಹಾಗೂ ರ್‍ಯಾಲಿಗಳ ಸಂಘಟನೆಯಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಪ್ರಯಾಣ ಭತ್ಯೆ ಹಾಗೂ ದಿನ ಭತ್ಯೆ ನೀಡುವಿಕೆ, ತಾಲೂಕು ಮಟ್ಟದಲ್ಲಿ ಕ್ರೀಡಾಂಗಣಗಳ ನಿರ್ಮಾಣ, ಸಾಹಸ ಕ್ರೀಡೆಗೆ ಪ್ರೋತ್ಸಾಹ, ಒಳಾಂಗಣ ಕ್ರೀಡಾಂಗಣ ಮತ್ತು ಬಯಲು ರಂಗಮಂದಿರಗಳ ನಿರ್ಮಾಣ, ಗ್ರಾಮಾಂತರ ಪ್ರದೇಶದಲ್ಲಿ ಕ್ರೀಡಾ ತರಬೇತಿ ಶಿಬಿರ ನಡೆಸುವುದು ಮುಂತಾದ ಯೋಜನೆ ಆಧಾರಿತ ಚಟುವಟಿಕೆಗಳನ್ನೂ ಈ ಕಾರ್ಯಾಲಯವು ನಡೆಸುತ್ತದೆ. ಭಾರತ ಕ್ರೀಡಾ ಪ್ರಾಧಿಕಾರದ ನಾಲ್ಕು ಜನ ತರಬೇತುದಾರರು ಹಾಗೂ ಕರ್ನಾಟಕ ಕ್ರೀಡಾ ಪ್ರಾಧಿಕಾರದ ೮ ಜನ ತರಬೇತುದಾರರು ಜಿಲ್ಲೆಯ ವಿವಿಧ ಕ್ರೀಡಾಂಗಣಗಳಲ್ಲಿ ಕ್ರೀಡಾ ಪಟುಗಳಿಗೆ ತರಬೇತಿ ನೀಡುತ್ತಿದ್ದಾರೆ.

### ರೇಷ್ಮೆ ಇಲಾಖೆ

ನೂತನ ತಾಂತ್ರಿಕತೆಗಳ ಪ್ರಚಾರ ಮತ್ತು ಬೆಳೆಗಾರರಿಗೆ ತರಬೇತಿ ನೀಡುವ ಮೂಲಕ ಜಿಲ್ಲೆಯಲ್ಲಿ ರೇಷ್ಮೆ ಕೃಷಿಯನ್ನು ಅಭಿವೃದ್ಧಿಗೊಳಿಸುವ ಉದ್ದೇಶದಿಂದ ಮಂಡ್ಯದಲ್ಲಿ ರೇಷ್ಮೆ ಉಪ ನಿರ್ದೇಶಕರ ಕಛೇರಿಯು ೧೯೮೮ರಿಂದ ಕಾರ್ಯನಿರ್ವಹಿಸುತ್ತಿದೆ. ಉಪನಿರ್ದೇಶಕರು ಈ ಕಛೇರಿಯ ಮುಖ್ಯಸ್ಥರಾಗಿದ್ದು ಇಬ್ಬರು ಪತ್ರಾಂಕಿತ ವ್ಯವಸ್ಥಾಪಕರೂ ಸೇರಿದಂತೆ ಒಟ್ಟು ೧೩ ಜನ ಇತರ ಸಿಬ್ಬಂದಿಗಳಿದ್ದಾರೆ.

ರೇಷ್ಮೆ ಹುಳು ಸಾಕಾಣಿಕಾ ಮನೆಗಳಿಗೆ ಸಾಲ ನೀಡುವುದು, ದ್ವಿತಳಿ ರೇಷ್ಮೆಗೂಡುಗಳಿಗೆ ಪ್ರೋತ್ಸಾಹಧನ ನೀಡುವುದು, ರೋಗ ನಿಯಂತ್ರಣ ಕಾರ್ಯಕ್ರಮ, ವಿಶೇಷ ಘಟಕ ಯೋಜನೆ ಅಡಿಯಲ್ಲಿ ಹೊಸದಾಗಿ ಹಿಪ್ಪುನೇರಳೆ ನಾಟಿಗೆ ಪ್ರೋತ್ಸಾಹಧನ ನೀಡುವಿಕೆ ಮುಂತಾದ, ರೇಷ್ಮೆಕೃಷಿ ಅಭಿವೃದ್ಧಿಗೆ ಸಂಬಂಧಿಸಿದ ವಿವಿಧ ಯೋಜನೆಗಳನ್ನು ಇಲಾಖೆಯು ಅನುಷ್ಠಾನಗೊಳಿಸುತ್ತಿದೆ. ಈ ಕಛೇರಿಯ ಅಧೀನದಲ್ಲಿ ಮಳವಳ್ಳಿ ಮತ್ತು ಕೃಷ್ಣರಾಜಪೇಟೆಗಳಲ್ಲಿ ರೇಷ್ಮೆ ಸಹಾಯಕ ನಿರ್ದೇಶಕರ ಕಛೇರಿ, ೨೧ ತಾಂತ್ರಿಕ ಸೇವಾ ಕೇಂದ್ರ, ಎರಡು ಬಿತ್ತನೆ ಕೋಠಿ ಹಾಗೂ ತಲಾ ಒಂದು ಗೂಡಿನ ಮಾರುಕಟ್ಟೆ ಹಾಗೂ ರೇಷ್ಮೆ ಕೃಷಿ ಕ್ಷೇತ್ರಗಳು ಕಾರ್ಯನಿರ್ವಹಿಸುತ್ತಿವೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮಂಡ್ಯ; ರೇಷ್ಮೆ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ರೇಷ್ಮೆ ಇಲಾಖೆ, ಬೆಂಗಳೂರು- ಅವರು ಮೇಲಿನ ನಿಯಂತ್ರಣಾಧಿಕಾರಿಗಳಾಗಿದ್ದಾರೆ.

### ಲೋಕಶಿಕ್ಷಣ ಇಲಾಖೆ

ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದ ಅಂಗವಾಗಿ ಜಿಲ್ಲೆಯಲ್ಲಿ ಸಾಕ್ಷರತಾ ಆಂದೋಲನದೊಂದಿಗೆ ಸಾಕ್ಷರೋತ್ತರ ಕಾರ್ಯಕ್ರಮಗಳನ್ನು ನಿಯೋಜಿಸುವುದು ಹಾಗೂ ೯ರಿಂದ ೩೫ ವರ್ಷ ವಯೋಮಿತಿಯ ಅನಕ್ಷರಸ್ಥರನ್ನು ಗುರುತಿಸಿ ಅವರಿಗೆ ಕಲಿಕಾ ಕಾರ್ಯಕ್ರಮ ಏರ್ಪಡಿಸುವ ಹಾಗೂ ಗಳಿಸಿದ ಅಕ್ಷರ ಜ್ಞಾನದಿಂದ ವೃತ್ತಿ ಕೌಶಲ ಮತ್ತು ನಾಗರಿಕ ಜವಾಬ್ದಾರಿಗಳ ನಿರ್ವಹಣೆಯ ಪೂರ್ಣ ಅರಿವು ಪಡೆದುಕೊಳ್ಳಲು ಪೂರಕ ಕಾರ್ಯಕ್ರಮಗಳ ನಿಯೋಜನೆ ಉದ್ದೇಶದಿಂದ ಮಂಡ್ಯದಲ್ಲಿ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ ಅವರ ಕಚೇರಿಯು ಸ್ಥಾಪನೆಗೊಂಡಿದೆ. ಅವರು ಈ ಕಚೇರಿಯ ಮುಖ್ಯಾಧಿಕಾರಿಯಾಗಿದ್ದು, ಸಂಪೂರ್ಣ ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿದ್ದಾರೆ. ಅವರ ನೆರವಿಗೆ ಒಬ್ಬ ಕಾರ್ಯಕ್ರಮ ಸಹಾಯಕ ಹಾಗೂ ಇನ್ನಿತರ ಮೂರು ಜನರ ಸಿಬ್ಬಂದಿ ವರ್ಗವಿದೆ. ಸಂಪನ್ಮೂಲ ವ್ಯಕ್ತಿ ಹಾಗೂ ತಜ್ಞರಿಂದ ಗ್ರಾಮಸಂಯೋಜಕರಿಗೆ ಸಮಗ್ರ ತರಬೇತಿ ನೀಡುವುದು, ಪ್ರಾರಂಭಿಕವಾಗಿ ೧೦೦ ಗ್ರಾಮಗಳನ್ನು ಆಯ್ದುಕೊಂಡು ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗೆ ಸೂಕ್ತ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುವುದು, ಗ್ರಾಮಗಳ ಸಂಪನ್ಮೂಲ ಪಟಗಳನ್ನು ತಯಾರಿಸಿಕೊಂಡು, ಹಳ್ಳಿಗಳ ಆವಶ್ಯಕತಾ ಪಟ್ಟಿ ತಯಾರಿಸಿ ಆದ್ಯತೆಯ ಮೇರೆಗೆ ಈ ಆವಶ್ಯಕತೆಗಳ ಪೂರೈಕೆಗೆ ಗ್ರಾಮಸ್ಥರ ಸಹಕಾರ ಹಾಗೂ ಸರ್ಕಾರದ ಸಹಾಯದೊಂದಿಗೆ ಪ್ರಯತ್ನಿಸುವುದು, ಆಗಾಗ ಗ್ರಾಮ ಸಭೆಗಳನ್ನು

ಏರ್ಪಡಿಸಿ ಆಯಾ ಗ್ರಾಮಗಳಿಗೆ ವಿವಿಧ ಮೂಲಗಳಿಂದ ಲಭ್ಯವಿರುವ ಸೌಲಭ್ಯಗಳನ್ನು ತಿಳಿಸುವುದೇ ಮೊದಲಾದ ಕಾರ್ಯ ಚಟುವಟಿಕೆಗಳನ್ನು ಈ ಕಚೇರಿ ನಡೆಸುತ್ತದೆ.

ಗ್ರಂಥಾಲಯಗಳ ಸ್ಥಾಪನೆ, ಮೂಢ ನಂಬಿಕೆಗಳ ವಿರುದ್ಧ ಜನರಲ್ಲಿ ಅರಿವು ಮೂಡಿಸುವುದು, ಯುವಕ ಯುವತಿಯರಿಗೆ ಆರೋಗ್ಯ ಶಿಕ್ಷಣದ ಬಗ್ಗೆ ತಿಳಿವಳಿಕೆ ನೀಡುವುದು, ಕಾನೂನು ಮಾಹಿತಿ ಒದಗಿಸುವುದೇ ಮುಂತಾದ ಇನ್ನಿತರ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದರ ಜೊತೆ ಜೊತೆಗೆ ಸ್ವಸಹಾಯಕ ತಂಡಗಳ ಮುಖೇನ ಗ್ರಾಮಸ್ಥರ ಆರ್ಥಿಕ ಸ್ಥಿತಿ ಸುಧಾರಣೆ ಮತ್ತು ಅವರಿಗೆ ನೆರವು ದೊರೆಯುವಂತೆ ಮಾಡುವುದು, ಜನ ಶಿಕ್ಷಣ ನಿಲಯಗಳ ನಿರ್ಮಾಣದಂಥ ಯೋಜನೆಗಳು, ರಾಷ್ಟ್ರೀಯ ಸಾಕ್ಷರತಾ ಮಿಷನ್ ರೂಪಿಸಿರುವ ಸಂಪೂರ್ಣ ಸಾಕ್ಷರತಾ ಆಂದೋಲನ, ಸಾಕ್ಷರೋತ್ತರ ಕಾರ್ಯಕ್ರಮ, ಮುಂದುವರಿಕೆ ಶಿಕ್ಷಣ ಕೇಂದ್ರಗಳ ಯೋಜನೆಗಳ ಅನುಷ್ಠಾನ ವ್ಯವಸ್ಥೆ ಮತ್ತು ಅವುಗಳ ಪರಿವೀಕ್ಷಣೆ ಮೊದಲಾದ ಕಾರ್ಯಗಳನ್ನು ಈ ಕಾರ್ಯಾಲಯ ಹಮ್ಮಿಕೊಂಡಿದೆ.

**ಲೋಕೋಪಯೋಗಿ ಇಲಾಖೆ**

ಲೋಕೋಪಯೋಗಿ ವಿಭಾಗೀಯ ಕಚೇರಿಯು ಮಂಡ್ಯದಲ್ಲಿ ೧೯೬೩ರಲ್ಲಿ ಪ್ರಾರಂಭಗೊಂಡಿತು. ಜಿಲ್ಲಾ ವ್ಯಾಪ್ತಿಯ ಅಧಿಕಾರವನ್ನು ಹೊಂದಿರುವ ಕಾರ್ಯ ನಿರ್ವಾಹಕ ಅಭಿಯಂತರರು ಈ ಕಚೇರಿಯ ಮುಖ್ಯಾಧಿಕಾರಿಯಾಗಿರುತ್ತಾರೆ. ಅವರ ನೆರವಿಗೆ ೩೬ ಜನ ಇನ್ನಿತರ ಸಿಬ್ಬಂದಿ ಇದೆ. ಸರ್ಕಾರಿ ಕಟ್ಟಡಗಳು, ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳು ಮತ್ತು ಸೇತುವೆಗಳ ನಿರ್ಮಾಣ, ನಿರ್ವಹಣೆ, ಠೇವಣಿ ವಂತಿಗೆಯ ಕಾಮಗಾರಿಗಳು ಹಾಗೂ ರಾಜ್ಯ ಸರ್ಕಾರ ಕಾಲಕಾಲಕ್ಕೆ ಪ್ರಕಟಿಸಿರುವ ಯೋಜನೆಗಳನ್ನು ಅನುಷ್ಠಾನಗೊಳಿಸುವುದೇ ಮೊದಲಾದವುಗಳು ಈ ಕಚೇರಿಯ ಕಾರ್ಯಚಟುವಟಿಕೆಗಳಾಗಿವೆ. ಕರ್ನಾಟಕ ಲೋಕೋಪಯೋಗಿ ಇಲಾಖೆ ಸಂಹಿತೆ, ಕರ್ನಾಟಕ ಲೋಕೋಪಯೋಗಿ ಲೆಕ್ಕಪತ್ರ ಸಂಹಿತೆ, ರಾಜ್ಯಹೆದ್ದಾರಿ ನಿಯಮ, ಕರ್ನಾಟಕ ಭೂಸ್ವಾಧೀನ ಕಾಯಿದೆ ಇತ್ಯಾದಿ ಅಧಿನಿಯಮಗಳನ್ನು ಕಚೇರಿ ತನ್ನ ಕೆಲಸ ಕಾರ್ಯದಲ್ಲಿ ಅನ್ವಯಗೊಳಿಸುತ್ತಿದೆ.

ಸರ್ಕಾರಿ ಕಟ್ಟಡಗಳು ಮತ್ತು ಲೋಕೋಪಯೋಗಿ ರಸ್ತೆಗಳ ನಿರ್ಮಾಣ ಹಾಗೂ ನಿರ್ವಹಣೆ ಜೊತೆಗೆ ನಬಾರ್ಡ್‌ನ ಆರ್.ಐ.ಡಿ.ಎಫ್ [ಗ್ರಾಮೀಣ ಮೂಲಭೂತ ಅಭಿವೃದ್ಧಿ ನಿಧಿ]ಯ ೧,೨,೩,೪,೫,೬ ಮತ್ತು ೭ರ ಯೋಜನೆಯಲ್ಲಿ ರಸ್ತೆಗಳ ಅಭಿವೃದ್ಧಿ ಕಾರ್ಯಕ್ರಮ, ೧೦೦ ಸೇತುವೆಗಳ ನಿರ್ಮಾಣ ಯೋಜನೆ, ರಸ್ತೆಯ ಗುಂಡಿಗಳನ್ನು ಮುಚ್ಚುವ ಕಾರ್ಯಕ್ರಮ ಮುಂತಾದ ಯೋಜನೆಗಳನ್ನು ಈ ಕಚೇರಿ ಅನುಷ್ಠಾನಗೊಳಿಸುತ್ತಿದೆ. ತಾಲೂಕು ಕೇಂದ್ರಗಳಲ್ಲಿ ಒಂದೊಂದು ಉಪ ವಿಭಾಗ ಕಚೇರಿ ಇದ್ದು, ಸಹಾಯಕ ಕಾರ್ಯಪಾಲಕ ಅಭಿಯಂತರರು ಆಯಾ ಕಚೇರಿಯ ಮುಖ್ಯಸ್ಥರಾಗಿದ್ದಾರೆ.

**ವಾಣಿಜ್ಯ ತೆರಿಗೆ ಇಲಾಖೆ**

ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರ, ೨ನೇ ವೃತ್ತ ಕಾರ್ಯಾಲಯವು ೧.೪.೧೯೮೨ ರಿಂದ ಮಂಡ್ಯದಲ್ಲಿ ಕಾರ್ಯಾರಂಭ ಮಾಡಿದೆ. ಪ್ರಾರಂಭದಲ್ಲಿ ವಾಣಿಜ್ಯ ತೆರಿಗೆ ಅಧಿಕಾರಿಗಳ ಉಸ್ತುವಾರಿಯಲ್ಲಿದ್ದ ಈ ಕಚೇರಿಯು ೧೯೯೨ರಿಂದ ಸಹಾಯಕ ಆಯುಕ್ತರು, ವೃತ್ತ ಕಚೇರಿ ಎಂದು ಮರುನಾಮಕರಣಗೊಂಡಿದೆ. ಮಂಡ್ಯ ನಗರದ ಅರ್ಧಭಾಗ ಹಾಗೂ ಶ್ರೀರಂಗಪಟ್ಟಣ, ನಾಗಮಂಗಲ, ಪಾಂಡವಪುರ ಮತ್ತು ಕೆ.ಆರ್.ಪೇಟೆ ತಾಲೂಕುಗಳ ಇದರ ವ್ಯಾಪ್ತಿಗೆ ಹೊಂದಿದ್ದು, ಜಿಲ್ಲೆಯ ಇನ್ನುಳಿದ ಭಾಗಗಳು ೧ನೇ ವೃತ್ತ ಕಾರ್ಯಾಲಯಕ್ಕೆ ಒಳಪಡುತ್ತವೆ. ವಾಣಿಜ್ಯ ತೆರಿಗೆ ಅಧಿಕಾರಿಗಳು ೧ ಹಾಗೂ ೨ ಮತ್ತು ವೃತ್ತಿ ತೆರಿಗೆ ಅಧಿಕಾರಿಗಳು ಹಾಗೂ ಸಂಚಾರಿ ದಳಗಳು ಸಹ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿವೆ. ವಲಯ ಕಚೇರಿಗೆ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು

ಮುಖ್ಯಾಧಿಕಾರಿಯಾಗಿದ್ದು, ಅವರ ನೆರವಿಗೆ ೧೧ ಜನ ಇತರ ಸಿಬ್ಬಂದಿ ಇದ್ದಾರೆ. ವ್ಯಾಪಾರಸ್ಥರ ವಾರ್ಷಿಕ ವಹಿವಾಟು ಏಳೂವರೆ ಲಕ್ಷಕ್ಕಿಂತ ಹೆಚ್ಚು ಹಾಗೂ ವಾರ್ಷಿಕ ಒಂದೂವರೆ ಲಕ್ಷಕ್ಕಿಂತ ಕಡಿಮೆ ತೆರಿಗೆ ಪಾವತಿಸಿದ ಪ್ರಕರಣಗಳು ಈ ಕಚೇರಿಯ ವ್ಯಾಪ್ತಿಗೆ ಬರುತ್ತವೆ. ತೆರಿಗೆ ಸಂಗ್ರಹಣೆ ಈ ಕಾರ್ಯಾಲಯದ ಪ್ರಮುಖ ಚಟುವಟಿಕೆಯಾಗಿದೆ.

ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ ೧೯೫೭, ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆ ೧೯೭೭, ಕರ್ನಾಟಕ ವೃತ್ತಿ ತೆರಿಗೆ ಕಾಯ್ದೆ ೧೯೭೬, ಕೇಂದ್ರ ಮಾರಾಟ ತೆರಿಗೆ ಕಾಯ್ದೆ ೧೯೫೬ ಹಾಗೂ ಕರ್ನಾಟಕ ವಿಲಾಸ ತೆರಿಗೆ ಕಾಯ್ದೆ ೧೯೭೯ ಹಾಗೂ ನಿಯಮಗಳು ಈ ಎಲ್ಲಾ ಅಧಿನಿಯಮ–ನಿಯಮಗಳನ್ನು ಕಾರ್ಯಾಲಯವು ತನ್ನ ಕಾರ್ಯನಿರ್ವಹಣೆಯಲ್ಲಿ ಅನ್ವಯಗೊಳಿಸುತ್ತಿದೆ. ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ಮೈಸೂರು ವಿಭಾಗ, ಮೈಸೂರು ಅವರು ಇದರ ಮೇಲಧಿಕಾರಿಯಾಗಿದ್ದಾರೆ.

**ವಾರ್ತಾ ಇಲಾಖೆ**

ಸರ್ಕಾರದ ಅಭಿವೃದ್ಧಿ ಯೋಜನೆ ಹಾಗೂ ಸಾಧನೆಗಳನ್ನು ಪತ್ರಿಕಾಸಂಪರ್ಕ ಮತ್ತು ವಿವಿಧ ಕಾರ್ಯಕ್ರಮಗಳ ಮೂಲಕ ಜಿಲ್ಲಾಮಟ್ಟದಲ್ಲಿ ಪ್ರಚುರಪಡಿಸುವ ಸಲುವಾಗಿ ಮಂಡ್ಯದಲ್ಲಿ ಜಿಲ್ಲಾ ವಾರ್ತಾ ಮತ್ತು ಪ್ರಚಾರ ಅಧಿಕಾರಿಯ ಕಛೇರಿಯು ೧೯೬೬ರಿಂದ ಕಾರ್ಯನಿರ್ವಹಿಸುತ್ತಿದೆ. ಜಿಲ್ಲಾ ವ್ಯಾಪ್ತಿಯ ಅಧಿಕಾರ ಹೊಂದಿರುವ ಜಿಲ್ಲಾ ವಾರ್ತಾ ಮತ್ತು ಪ್ರಚಾರ ಅಧಿಕಾರಿಯು ಅದರ ಮುಖ್ಯಸ್ಥರಾಗಿದ್ದು ವಾರ್ತಾ ಸಹಾಯಕ ಹುದ್ದೆಯೂ ಸೇರಿದಂತೆ ಇತರ ೧೧ ಜನ ಸಿಬ್ಬಂದಿ ಇದೆ. ಇದೇ ಕಛೇರಿಯ ಅಧೀನದ ಉಪವಿಭಾಗ ಮಟ್ಟದ ಕಛೇರಿಯು ಪಾಂಡವಪುರದಲ್ಲಿ ಇದ್ದು ಸಹಾಯಕ ನಿರ್ದೇಶಕರು ಅದರ ಮುಖ್ಯಸ್ಥರಾಗಿರುತ್ತಾರೆ.

**ಸರ್ಕಾರಿ ವಿಮಾ ಇಲಾಖೆ**

ರಾಜ್ಯ ಸರ್ಕಾರಿ ನೌಕರರಿಗೆ ಕಡ್ಡಾಯ ಜೀವವಿಮೆಯನ್ನು ಅನುಷ್ಠಾನಗೊಳಿಸುವ ಉದ್ದೇಶದಿಂದ ಮಂಡ್ಯದಲ್ಲಿ ಜಿಲ್ಲಾ ವಿಮಾ ಅಧಿಕಾರಿ ಕಚೇರಿಯು ೧೯೭೬ರಲ್ಲಿ ಪ್ರಾರಂಭಗೊಂಡಿತು. ಜಿಲ್ಲಾ ವಿಮಾಧಿಕಾರಿಯು ಈ ಕಚೇರಿಯ ಮುಖ್ಯಸ್ಥರಾಗಿದ್ದು ಅವರ ಸಹಾಯಕ್ಕೆ ೨೬ ಜನ ಸಹಾಯಕ ಸಿಬ್ಬಂದಿ ಇದ್ದಾರೆ. ಕಡ್ಡಾಯ ಜೀವ ವಿಮೆ, ನೌಕರರಿಗೆ ಸಾಲ ಮಂಜೂರಾತಿ ಹಾಗೂ ಫಲಪ್ರದ, ಮರಣ ಜನ್ಯ ಹಾಗೂ ವಿಮಾ ತ್ಯಾಗ ಮೌಲ್ಯದ ಹಣವನ್ನು ಇತ್ಯರ್ಥಪಡಿಸುವುದು, ಸರ್ಕಾರಿ ವಾಹನಗಳ ವಿಮೆ ಮಾಡಿಸುವುದು, ಸರ್ಕಾರಿ ನೌಕರರು ಇಲಾಖೆಯ ಮುಂಗಡದಿಂದ ಪಡೆದ ವಾಹನ ವಿಮೆ, ಸ್ಥಳೀಯ ಸಂಸ್ಥೆ ಹಾಗೂ ಅನುದಾನಿತ ವಿದ್ಯಾ ಸಂಸ್ಥೆಗಳ ಕುಟುಂಬ ಕಲ್ಯಾಣ ನಿಧಿಯ ಹಣದ ಮಂಜೂರಾತಿ ಹಾಗೂ ಮೇಲು ಸಹಿಯ ಪ್ರಾಧಿಕಾರ ಇತ್ಯಾದಿಗಳು ಈ ಕಚೇರಿ ಕೈಗೊಳ್ಳುತ್ತಿರುವ ಕಾರ್ಯಚಟುವಟಿಕೆಗಳಾಗಿವೆ. ಸರ್ಕಾರಿ ನೌಕರರ ಕಡ್ಡಾಯ ಜೀವ ವಿಮಾ ನಿಯಮಗಳು ೧೯೫೮ಅನ್ನು ಈ ಕಚೇರಿಯು ತನ್ನ ಕೆಲಸದಲ್ಲಿ ಅನ್ವಯಗೊಳಿಸುತ್ತಿದೆ.

ರಾಜ್ಯ ಸರ್ಕಾರಿ ನೌಕರರಲ್ಲಿ ಪ್ರತಿಶತ ೧೦೦ರ ವಿಮೆಯನ್ನು ಮಾಡುವ ಯೋಜನೆಯನ್ನು ಹಾಕಿಕೊಂಡು ಈ ಕಚೇರಿಯು ಕಾರ್ಯನಿರ್ವಹಿಸುತ್ತಿದೆ.

**ಸಣ್ಣ ಉಳಿತಾಯ ಇಲಾಖೆ**

ಸಾರ್ವಜನಿಕರಲ್ಲಿ ಉಳಿತಾಯ ಮನೋಭಾವ ಮೂಡಿಸಿ ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಆವಶ್ಯಕವಾದ ಸಂಪನ್ಮೂಲಗಳನ್ನು ಸಂಗ್ರಹಿಸುವ ಉದ್ದೇಶದಿಂದ ಸಣ್ಣ ಉಳಿತಾಯ ಇಲಾಖೆಯು ಮಂಡ್ಯದಲ್ಲಿ ಕಾರ್ಯಾರಂಭ ಮಾಡಿದೆ. ಮಂಡ್ಯ ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುವ ಸಹಾಯಕ ನಿರ್ದೇಶಕರು ಈ ಕಚೇರಿಯ

ಮುಖ್ಯಾಧಿಕಾರಿಯಾಗಿದ್ದು, ಅವರ ನೆರವಿಗೆ ಒಬ್ಬ ಅಭಿವೃದ್ಧಿ ಅಧಿಕಾರಿ ಹಾಗೂ ಇತರ ಸಿಬ್ಬಂದಿ ಇದ್ದಾರೆ. ತಾಲೂಕು ಕೇಂದ್ರ ಕಚೇರಿಗಳು ಸಹಾಯಕ ಅಭಿವೃದ್ಧಿ ಅಧಿಕಾರಿಗಳ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತವೆ. ಸರ್ಕಾರ ನಿಗದಿಪಡಿಸಿದ ಜಿಲ್ಲಾ ವಾರ್ಷಿಕ ಗುರಿ ಸಾಧನೆಗೆ ಸರ್ವ ಪ್ರಯತ್ನ ಮಾಡುವುದು, ಜನರನ್ನು ಸಣ್ಣ ಉಳಿತಾಯಕ್ಕೆ ಪ್ರೇರೇಪಿಸುವುದು, ಪ್ರೋತ್ಸಾಹ ರೂಪದಲ್ಲಿ ನೀಡುವ ಹಣವನ್ನು ಜಾರಿಗೊಳಿಸುವುದು, ವಿದ್ಯಾಸಂಸ್ಥೆಗಳಿಗೆ, ಮುಜರಾಯಿ ಸಂಸ್ಥೆಗಳಿಗೆ, ಯುವಕ ಯುವತಿಯರ ಸಂಘಗಳಿಗೆ ಸಣ್ಣ ಉಳಿತಾಯದ ಅಧಿಕೃತ ಏಜೆನ್ಸಿ ಕೊಟ್ಟು ಪ್ರೋತ್ಸಾಹಿಸುವುದು ಈ ಕಚೇರಿಯ ಚಟುವಟಿಕೆಗಳಾಗಿವೆ. ಸಣ್ಣಉಳಿತಾಯ ಹಾಗೂ ಲಾಟರಿ ಇಲಾಖೆಗೆ ಅನ್ವಯಿಸುವಂತೆ ೧೯೯೦ರಲ್ಲಿ ಜಾರಿಗೊಳಿಸಿದ ಕೈಪಿಡಿ ಹಾಗೂ ಕೇಂದ್ರಸರ್ಕಾರವು ಅಂಚೆಕಚೇರಿಗಳ ಮೂಲಕ ಕಾಲಕಾಲಕ್ಕೆ ಜಾರಿಗೊಳಿಸುತ್ತಿರುವ ನಿಯಮಗಳನ್ನು ಈ ಕಚೇರಿಯು ಅನ್ವಯಗೊಳಿಸುತ್ತಿದೆ. ನಿರ್ದೇಶಕರು, ಸಣ್ಣಉಳಿತಾಯ ಮತ್ತು ರಾಜ್ಯ ಲಾಟರಿ ಇಲಾಖೆ, ಬೆಂಗಳೂರು ಇವರು ತಕ್ಷಣದ ಮೇಲಧಿಕಾರಿಯಾಗಿರುತ್ತಾರೆ.

## ಸಮಾಜ ಕಲ್ಯಾಣ ಇಲಾಖೆ

ಪರಿಶಿಷ್ಟಜಾತಿ-ಪಂಗಡದವರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು ಹಾಗೂ ಅವರ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ನೀಡುವ ಉದ್ದೇಶದಿಂದ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಕಚೇರಿಯು ಮಂಡ್ಯದಲ್ಲಿ ೧೯೬೨ರಿಂದ ಕಾರ್ಯನಿರ್ವಹಿಸುತ್ತಿದೆ. ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯು ಅದರ ಮುಖ್ಯ ಆಡಳಿತಾಧಿಕಾರಿಯಾಗಿದ್ದು ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿದ್ದಾರೆ. ಅವರ ನೆರವಿಗೆ ಒಬ್ಬ ಕಚೇರಿ ವ್ಯವಸ್ಥಾಪಕ ಮತ್ತು ಒಬ್ಬ ವಿಶೇಷ ಘಟಕ ಅಧೀಕ್ಷಕರೂ ಸೇರಿದಂತೆ ೧೨ ಜನ ಇತರ ಸಿಬ್ಬಂದಿ ಇದ್ದಾರೆ.

ಪರಿಶಿಷ್ಟಜಾತಿ ಮತ್ತು ಪರಿಶಿಷ್ಟಪಂಗಡಗಳ ಅಭಿವೃದ್ಧಿ, ಈ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ನಗದು ಬಹುಮಾನ ಯೋಜನೆ ಹಾಗೂ ಹಾಸ್ಟೆಲ್ ಸೌಲಭ್ಯ ಒದಗಿಸುವುದು, ಪರಿಶಿಷ್ಟಜಾತಿಯವರಿಗೆ ನೀರಾವರಿ ಪಂಪ್‌ಸೆಟ್ ನೀಡುವುದೇ ಮುಂತಾದ ಕಲ್ಯಾಣ ಕಾರ್ಯಕ್ರಮಗಳನ್ನು ಈ ಕಚೇರಿಯು ಕಾರ್ಯರೂಪಗೊಳಿಸುತ್ತಿದ್ದು, ಅದರ ಅಧೀನದಲ್ಲಿ ತಾಲೂಕು ಸಮಾಜ ಕಲ್ಯಾಣ ಕಚೇರಿಗಳು ತಮ್ಮ ವ್ಯಾಪ್ತಿಯಲ್ಲಿಯ ಪರಿಶಿಷ್ಟಜಾತಿ/ವರ್ಗಗಳ ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಾರೆ. ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಮಂಡ್ಯ ಮತ್ತು ನಿರ್ದೇಶಕರು, ಸಮಾಜ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು ಇವರು ಮೇಲಧಿಕಾರಿಯಾಗಿರುತ್ತಾರೆ.

## ಸಾರ್ವಜನಿಕ ಗ್ರಂಥಾಲಯ ಇಲಾಖೆ

ಜನತೆಯು ಬೌದ್ಧಿಕ ಬೆಳವಣಿಗೆಗೆ ಮಾಹಿತಿ ಕೇಂದ್ರಗಳಾದ ಗ್ರಂಥಾಲಯಗಳನ್ನು ಶ್ರೀಸಾಮಾನ್ಯರ ವಿಶ್ವವಿದ್ಯಾಲಯಗಳೆಂದೇ ಹೇಳಬಹುದು. ಸರ್ಕಾರ ಈ ದಿಸೆಯಲ್ಲಿ ಜಾರಿಗೊಳಿಸಿದ ೧೯೬೫ರ ಸಾರ್ವಜನಿಕ ಗ್ರಂಥಾಲಯ ಕಾಯ್ದೆಯ ಉಪವಿಧಿಯನ್ವಯ ಮಂಡ್ಯ ನಗರದಲ್ಲಿ ೧೯೭೫ರಲ್ಲಿ ಜಿಲ್ಲಾ ಕೇಂದ್ರ ಗ್ರಂಥಾಲಯ ಸ್ಥಾಪನೆಗೊಂಡಿತು. ತದನಂತರದಲ್ಲಿ ಜಿಲ್ಲೆಯಾದ್ಯಂತ ತಾಲೂಕು ಶಾಖೆ ಹಾಗೂ ಗ್ರಂಥ ವಿತರಣಾ ಕೇಂದ್ರಗಳು ಸರ್ಕಾರದ ಯೋಜನೆಯಡಿ ೧೯೭೮ರಲ್ಲಿ ಪ್ರಾರಂಭಗೊಂಡು ನಗರ ಹಾಗೂ ಗ್ರಾಮೀಣ ಪ್ರದೇಶದ ಜನರಿಗೆ ಹೆಚ್ಚಿನ ಓದುವ ಅವಕಾಶ ಒದಗಿಸಿವೆ. ಸರ್ಕಾರದ ವಿಕೇಂದ್ರೀಕರಣ ಅಧಿಕಾರ ಹಾಗೂ ಸೇವೆ ದೃಷ್ಟಿಯ ಹಿನ್ನೆಲೆಯಲ್ಲಿ ೧೯೮೮ರಿಂದ ಮಂಡಲಕ್ಕೊಂದು ಗ್ರಂಥಾಲಯ ಕಾರ್ಯಕ್ರಮದಂತೆ ಮಾರ್ಚ್ ೨೦೦೨ರವರೆಗೆ ೧೮೫ ಗ್ರಾಮ ಪಂಚಾಯ್ತಿ ಗ್ರಂಥಾಲಯಗಳು ಜಿಲ್ಲೆಯಲ್ಲಿ ಪ್ರಾರಂಭವಾಗಿವೆ. ಜಿಲ್ಲಾ ಕೇಂದ್ರ ಗ್ರಂಥಾಲಯ ಸ್ಥಾಪನೆಗೊಳ್ಳುವ ಪೂರ್ವದಲ್ಲಿ ೧೯೪೦ರಷ್ಟು ಹಿಂದೆಯೇ ಮಂಡ್ಯದಲ್ಲಿ ಸಾರ್ವಜನಿಕ ಗ್ರಂಥಾಲಯವೊಂದು ಸ್ಥಾಪನೆಗೊಂಡಿದ್ದು ಅದರ ನಿರ್ವಹಣೆಯನ್ನು ಹತ್ತು ಸದಸ್ಯರ ಸಮಿತಿಯೊಂದು ನೋಡಿಕೊಳ್ಳುತ್ತಿದ್ದಿತು. ಆಗ ಸರ್ಕಾರದಿಂದ ೫೦೦ರೂ. ಅನುದಾನವನ್ನು ಇದು ಪಡೆದುಕೊಂಡಿದ್ದಿತು. ಮಂಡ್ಯ

ಜಿಲ್ಲೆಗೆ ಸೇರಿದ ಮೇಲುಕೋಟೆ ಪಟ್ಟಣದಲ್ಲಿ ಸಾರ್ವಜನಿಕ ಗ್ರಂಥಾಲಯವು ಅಸ್ತಿತ್ವದಲ್ಲಿ ಇದ್ದ ಬಗ್ಗೆ ಮಾಹಿತಿ ದೊರೆಯುತ್ತದೆ. ಈ ಗ್ರಂಥಾಲಯವು ೧೯೩೫ರಲ್ಲಿ ಪ್ರಾರಂಭಗೊಂಡಿದ್ದು ೧೫ ಜನರ ಸಮಿತಿಯ ನಿರ್ವಹಣೆಗೆ ಒಳಪಟ್ಟಿದ್ದು, ಆ ಗ್ರಂಥಾಲಯಕ್ಕೆ ಸರ್ಕಾರ ಹಾಗೂ ಮೇಲುಕೋಟೆ ಪಟ್ಟಣದ ಪುರಸಭೆ ಅನುದಾನವನ್ನೂ ನೀಡುತ್ತಿದ್ದಿತು. ಈಗ ಈ ಎಲ್ಲಾ ಗ್ರಂಥಾಲಯಗಳ ನಿರ್ವಹಣೆ ಶೇ. ೬ ರಂತೆ ಭೂ ಕಂದಾಯ ವಸೂಲಾತಿಯಿಂದ ಸಂಗ್ರಹಿಸಿದ ಕರ ಮೊತ್ತದಿಂದ ನಡೆಯುತ್ತಿದೆ. ಪ್ರಸ್ತುತ, ಮುಖ್ಯ ಗ್ರಂಥಾಲಯಾಧಿಕಾರಿಯು ಜಿಲ್ಲಾ ಕೇಂದ್ರ ಗ್ರಂಥಾಲಯದ ಮುಖ್ಯಸ್ಥರಿದ್ದು ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿದ್ದಾರೆ. ಅವರ ನೆರವಿಗೆ ೨೫ ಜನ ಇತರ ಸಿಬ್ಬಂದಿ ಇದ್ದಾರೆ. ತಾಲೂಕು ಹಾಗೂ ಗ್ರಾಮ ಪಂಚಾಯಿತಿ ಗ್ರಂಥಾಲಯಗಳ ಮೇಲ್ವಿಚಾರಣೆ ಆಡಳಿತ ಮುಖ್ಯ ಗ್ರಂಥಾಲಯಾಧಿಕಾರಿಯ ಅಧಿಕಾರಕ್ಕೆ ಒಳಪಟ್ಟಿದ್ದು, ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ಇವರು ಮೇಲಧಿಕಾರಿಯಾಗಿರುತ್ತಾರೆ.

**ಸಾರ್ವಜನಿಕ ಶಿಕ್ಷಣ ಇಲಾಖೆ**

ಮಂಡ್ಯ ಜಿಲ್ಲೆಯಾದ್ಯಂತ ಒಂದರಿಂದ ೧೦ನೇ ತರಗತಿಯವರೆಗಿನ ಶೈಕ್ಷಣಿಕ ಪ್ರಗತಿ ಪರಿಶೀಲನೆ, ಆಡಳಿತ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳ ಅನುಷ್ಠಾನ ಹಾಗೂ ಅಭಿವೃದ್ಧಿ ಯೋಜನೆಗಳನ್ನು ಕಾರ್ಯರೂಪಗೊಳಿಸುವ ಉದ್ದೇಶದಿಂದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಚೇರಿಯು ಮಂಡ್ಯದಲ್ಲಿ ೧೯೭೦ರಲ್ಲಿ ಪ್ರಾರಂಭಗೊಂಡಿತು. ಅದಕ್ಕೂ ಪೂರ್ವದಲ್ಲಿ ಈ ಕಾರ್ಯಾಲಯವು ಶಿಕ್ಷಣಾಧಿಕಾರಿಯವರ ಕಾರ್ಯಾಲಯವಾಗಿದ್ದಿತು. ಉಪನಿರ್ದೇಶಕರು (ಸಾರ್ವಜನಿಕ ಶಿಕ್ಷಣ) ಈ ಜಿಲ್ಲಾ ಕಚೇರಿಯ ಮುಖ್ಯಾಧಿಕಾರಿಯಾಗಿದ್ದು, ಜಿಲ್ಲಾ ವ್ಯಾಪ್ತಿಯ ಆಡಳಿತಾಧಿಕಾರವನ್ನು ಹೊಂದಿರುವರು. ಅವರ ನೆರವಿಗೆ ಇಬ್ಬರು ಶಿಕ್ಷಣಾಧಿಕಾರಿಗಳು ಹಾಗೂ ಇನ್ನಿತರ ೫೯ ಜನರ ಸಿಬ್ಬಂದಿ ಇದೆ. ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರ ನೇಮಕಾತಿ, ವರ್ಗಾವಣೆ, ಕಾಲಮಿತಿ ಬಡ್ತಿ ಮಂಜೂರಾತಿ, ಖಾಸಗಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಮಾನ್ಯತೆ ನವೀಕರಣ, ಅನುದಾನಿತ ಖಾಸಗಿ ಶಾಲೆಗಳ ನಿರ್ವಹಣಾ ಅನುದಾನ ಮಂಜೂರಾತಿ, ಶಿಕ್ಷಕರ ನೇಮಕಾತಿ ಅನುಮೋದನೆ, ಜಿಲ್ಲಾಮಟ್ಟದಲ್ಲಿ ೭ನೇ ತರಗತಿಯ ಪರೀಕ್ಷೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ಪ್ರೌಢ ಶಾಲೆ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳ ತಪಾಸಣೆ ಮುಂತಾದ ಆಡಳಿತಾತ್ಮಕ ಕಾರ್ಯಕ್ರಮಗಳ ಹಾಗೂ ಜಿಲ್ಲೆಯ ಶಿಕ್ಷಣ ಸಂಸ್ಥೆಗಳ ನಿರ್ವಹಣೆ ಮತ್ತು ಉಸ್ತುವಾರಿ, ಸಂಸ್ಥಾಯೋಜನೆ, ಪರೀಕ್ಷಾ ಮೇಲ್ವಿಚಾರಣೆ, ಶಿಕ್ಷಕರ ತರಬೇತಿ, ಶಾಲಾ ಸಂಕೀರ್ಣ ಬಲಸಂವರ್ಧನೆ, ವಿಜ್ಞಾನ ವಸ್ತು ಪ್ರದರ್ಶನ ಏರ್ಪಡಿಸುವಿಕೆ, ಶೈಕ್ಷಣಿಕ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳುವಿಕೆ, ವೃತ್ತಿ ಸಂಬಂಧ ಚಟುವಟಿಕೆಗಳನ್ನು ಚುರುಕುಗೊಳಿಸುವುದೇ ಮೊದಲಾದ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳನ್ನು ಈ ಕಚೇರಿ ಕೈಗೊಳ್ಳುತ್ತಿದೆ.

ಕೇಂದ್ರ ಪುರಸ್ಕೃತ ಕಪ್ಪು ಹಲಗೆ ಕಾರ್ಯಕ್ರಮ, ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ, ಮಧ್ಯಾಹ್ನ ಉಪಾಹಾರ ಯೋಜನೆ, ಉಚಿತ ಸಮವಸ್ತ್ರ, ಪಠ್ಯ ಪುಸ್ತಕ ಹಾಗೂ ಶಾಲಾ ಬ್ಯಾಗ್ ವಿತರಣೆ, ಶಾಲಾ ಕೊಠಡಿಗಳ ನಿರ್ಮಾಣ ಮತ್ತು ದುರಸ್ತಿ, ಶಾಲೆಗಳಿಗೆ ಉಪಕರಣ ಸರಬರಾಜು ಮತ್ತು ಶಿಕ್ಷಕರ ತರಬೇತಿ ಮುಂತಾದ ಯೋಜನೆಗಳನ್ನೂ ಈ ಕಚೇರಿಯು ಅನುಷ್ಠಾನಗೊಳಿಸುತ್ತಿದೆ. ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾಪಂಚಾಯತ್, ಮಂಡ್ಯ ಹಾಗೂ ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ಇವರು ತಕ್ಷಣದ ಮೇಲಧಿಕಾರಿಯಾಗಿರುತ್ತಾರೆ.

**ಹಿಂದುಳಿದ ವರ್ಗಗಳ ಇಲಾಖೆ**

ಹಿಂದುಳಿದ ಜನಾಂಗದ ಸರ್ವಾಂಗೀಣ ಅಭಿವೃದ್ಧಿ ಉದ್ದೇಶದಿಂದ ಮಂಡ್ಯದಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಜಿಲ್ಲಾ ಕಚೇರಿಯು ೧೯೭೭ರಲ್ಲಿ ಪ್ರಾರಂಭಗೊಂಡಿತು. ಈ ಕಚೇರಿಯ ಮುಖ್ಯಸ್ಥರಾದ ಜಿಲ್ಲಾ ಅಧಿಕಾರಿಗೆ ಜಿಲ್ಲಾ ವ್ಯಾಪ್ತಿ ಅಧಿಕಾರವಿದ್ದು, ಅವರ ನೆರವಿಗೆ ಎಂಟು ಜನ ಸಿಬ್ಬಂದಿ ಇದ್ದಾರೆ. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಮತ್ತು ಜನಾಂಗದ ಸರ್ವಾಂಗೀಣ ಅಭಿವೃದ್ಧಿಗಾಗಿ ಈ ಮುಂದಿನ ಕಾರ್ಯಕ್ರಮಗಳನ್ನು ಕಚೇರಿ ಕೈಗೊಳ್ಳುತ್ತಿದೆ:

ಮೆಟ್ರಿಕ್ ಪೂರ್ವ ಮತ್ತು ನಂತರದ ವಿದ್ಯಾರ್ಥಿ ವೇತನ ನೀಡಿಕೆ, ಶಿಕ್ಷಣ ಶುಲ್ಕಗಳ ರಿಯಾಯಿತಿ, ಕಾನೂನು ಪದವೀಧರರಿಗೆ ತರಬೇತಿ, ಬೆರಳಚ್ಚು ಹಾಗೂ ಶೀಘ್ರಲಿಪಿಗಾರರಿಗೆ ಶಿಷ್ಯವೇತನ, ಆಶ್ರಮ ಶಾಲೆಗಳ ನಿರ್ವಹಣೆ, ನವೋದಯ ಮಾದರಿಯ ವಸತಿ ಶಾಲೆಗಳ ನಿರ್ವಹಣೆ, ಐ.ಟಿ.ಐ. ಡಿಪ್ಲೊಮಾ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮತೀಯ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಶಿಷ್ಯವೇತನ, ಹೆಚ್ಚುವರಿ ಭೋಜನಾ ವೆಚ್ಚ ನೀಡಿಕೆ (೧ನೇ ವರ್ಗದ ವಿದ್ಯಾರ್ಥಿಗಳಿಗೆ ಮಾತ್ರ), ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯ ಮತ್ತು ಅನಾಥಾಲಯಗಳಿಗೆ ಸಹಾಯಾನುದಾನ ನೀಡಿಕೆ, ಪ್ರೋತ್ಸಾಹ ಧನ ಮಂಜೂರಾತಿ, ಮಾಂಗಲ್ಯ ಭಾಗ್ಯ ಯೋಜನೆ ಹಾಗೂ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ನಿರ್ವಹಣೆ. ಜಿಲ್ಲೆಯಲ್ಲಿ ಇರುವ ಒಟ್ಟು ೬೬ ವಿದ್ಯಾರ್ಥಿನಿಲಯಗಳಲ್ಲಿ ೩,೫೦೫ ಫಲಾನುಭವಿಗಳು ಈ ಯೋಜನೆಗಳ ಫಲ ಪಡೆಯುತ್ತಿದ್ದಾರೆ. ಅಲ್ಲದೆ, ೨೦೦ ಸಂಖ್ಯಾಬಲದ ಒಂದು ನವೋದಯ ಮಾದರಿ ವಸತಿ ಶಾಲೆ ಮತ್ತು ೫೦ ಸಂಖ್ಯಾಬಲದ ಒಂದು ಆಶ್ರಮ ಶಾಲೆ ಸಹ ಈ ಇಲಾಖೆಯ ನಿರ್ವಹಣೆಯಲ್ಲಿವೆ. ತಾಲೂಕು ಪಂಚಾಯತ್ ಕಾರ್ಯಾಲಯದ ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿ ಅವರು ಇಲಾಖೆಯ ಕೆಲಸ ಕಾರ್ಯಗಳ ಉಸ್ತುವಾರಿ ನೋಡಿಕೊಳ್ಳುವರು. ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮಂಡ್ಯ ಹಾಗೂ ನಿರ್ದೇಶಕರು, ಹಿಂದುಳಿದ ವರ್ಗಗಳ ಇಲಾಖೆ, ಬೆಂಗಳೂರು ಇವರು ಮೇಲಧಿಕಾರಿಗಳಾಗಿರುತ್ತಾರೆ.

## ಕೇಂದ್ರ ಸರ್ಕಾರದ ಕಚೇರಿಗಳು

### ಆದಾಯ ತೆರಿಗೆ ಇಲಾಖೆ

ಕೇಂದ್ರ ಸರ್ಕಾರದ ಕಂದಾಯ ಮೂಲಗಳಲ್ಲೊಂದಾದ ಆದಾಯ ತೆರಿಗೆ ಹಾಗೂ ಅದಕ್ಕೆ ಸಂಬಂಧಿಸಿದ ತೆರಿಗೆ ನಿಯಮಗಳನ್ನು ಜಾರಿಗೊಳಿಸುವ ಉದ್ದೇಶದಿಂದ ಮಂಡ್ಯದಲ್ಲಿ ಆದಾಯ ತೆರಿಗೆ ಅಧಿಕಾರಿಯ ಕಚೇರಿಯು ೧೯೭೦ರಲ್ಲಿ ಪ್ರಾರಂಭಗೊಂಡಿತು. ಈ ಕಚೇರಿಯ ಅಧಿಕಾರ ವ್ಯಾಪ್ತಿಯು ಮಂಡ್ಯ ಜಿಲ್ಲೆಯ ಎಲ್ಲ ತಾಲೂಕುಗಳು ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರಾಮನಗರ ಮತ್ತು ಚನ್ನಪಟ್ಟಣ ತಾಲೂಕುಗಳಿಗೂ ವಿಸ್ತರಿಸಲ್ಪಟ್ಟಿದೆ. ಕಾಯ್ದೆ ಹಾಗೂ ನಿಯಮಗಳಿಗನುಸಾರವಾಗಿ ಬೇರೆ ಬೇರೆ ವಿಧಾನಗಳಿಂದ ಆದಾಯ ತೆರಿಗೆಯನ್ನು ಸಂಗ್ರಹಿಸುವುದು ಹಾಗೂ ಜನರಲ್ಲಿ ಸಮಯಕ್ಕನುಗುಣವಾಗಿ ಸರಿಯಾದ ತೆರಿಗೆ ಸಂದಾಯದ ಮನೋಭಾವವನ್ನು ಜಾಗೃತಗೊಳಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಈ ಕಚೇರಿಯ ಚಟುವಟಿಕೆಗಳಾಗಿವೆ. ಆದಾಯ ತೆರಿಗೆ ಕಾಯ್ದೆ(೧೯೬೧), ಆದಾಯ ತೆರಿಗೆ ನಿಯಮಗಳು (೧೯೬೨), ಸಂಪತ್ತು ತೆರಿಗೆ ಕಾಯ್ದೆ (೧೯೫೬) ಮತ್ತು ಉಡುಗೊರೆ (ಗಿಫ್ಟ್) ತೆರಿಗೆ ಅಧಿನಿಯಮ (೧೯೫೮) ಹಾಗೂ ಸರ್ಕಾರದ ಇತರ ಅಧಿನಿಯಮ, ನಿಯಮಗಳನ್ನು ಈ ಕಾರ್ಯಾಲಯ ಅನ್ವಯಗೊಳಿಸುತ್ತಿದೆ. ಕಾರ್ಯಾಲಯವನ್ನು ಇತ್ತೀಚೆಗೆ ಗಣಕೀಕರಿಸಲಾಗಿದ್ದು ಖಾಯಂ ಖಾತೆ ಸಂಖ್ಯೆ (ಪಾನ್) ಯನ್ನು ಆದಾಯ ತೆರಿಗೆಗೆ ಒಳಪಡುವವರಿಗೆ ನೀಡಲಾಗುತ್ತಿದೆ. ಜಂಟಿ ಆಯುಕ್ತರು, ಆದಾಯ ತೆರಿಗೆ ಮೈಸೂರು ವಲಯ, ಮೈಸೂರು ಇವರು ಮೇಲಧಿಕಾರಿಯಾಗಿರುತ್ತಾರೆ.

### ಕೇಂದ್ರ ಅಬಕಾರಿ ಇಲಾಖೆ

ಮಂಡ್ಯದಲ್ಲಿ ಕೇಂದ್ರ ಅಬಕಾರಿ ಅಧೀಕ್ಷಕರ ಕಾರ್ಯಾಲಯವು ೧೯೭೩ರಲ್ಲಿ ಪ್ರಾರಂಭಗೊಂಡಿತು. ಇದು ವಲಯ ಕಚೇರಿಯಾಗಿದ್ದು, ಅಬಕಾರಿ ಅಧೀಕ್ಷಕರು ಕಚೇರಿಯ ಮುಖ್ಯಸ್ಥರು. ಅಧಿಕಾರ ವ್ಯಾಪ್ತಿಯು ಸಂಪೂರ್ಣ ಮಂಡ್ಯ ಜಿಲ್ಲೆಯಾಗಿದೆ. ಅವರ ನೆರವಿಗೆ ಮೂರು ಜನ ನಿರೀಕ್ಷಕರು ಹಾಗೂ ಇಬ್ಬರು ಸಿಬ್ಬಂದಿ ಇದ್ದಾರೆ. ಮಂಡ್ಯ ಜಿಲ್ಲೆಯಲ್ಲಿ ಉತ್ಪಾದನೆಯಾಗುವ ವಸ್ತುಗಳ ಮೇಲಿನ ಉತ್ಪಾದನಾ ತೆರಿಗೆ ಸಂಗ್ರಹಣೆ ಈ ಕಚೇರಿಯ ಮುಖ್ಯ ಚಟುವಟಿಕೆಯಾಗಿದೆ. ಕೇಂದ್ರ ಅಬಕಾರಿ ಕಾಯ್ದೆ ೧೯೪೪, ನಿಯಮಗಳು ೧೯೪೪ ಹಾಗೂ ಕೇಂದ್ರ ಅಬಕಾರಿ ಸುಂಕ

ಕಾಯ್ದೆ ೧೯೮೫ ಅಧಿನಿಯಮ ಹಾಗೂ ನಿಯಮಗಳನ್ನು ಈ ಕಚೇರಿಯು ಕಾರ್ಯಗತಗೊಳಿಸುತ್ತಿದೆ. ಸಹಾಯಕ ಆಯುಕ್ತರು ಮೈಸೂರು-೧ ವಿಭಾಗ, ಮೈಸೂರು ಅವರು ಇದರ ಮೇಲಧಿಕಾರಿಯಾಗಿರುತ್ತಾರೆ.

**ಭಾರತೀಯ ಅಂಚೆ ಇಲಾಖೆ**

ಜಿಲ್ಲೆಯ ಜನತೆಗೆ ಅಂಚೆ ಸೇವೆ ಒದಗಿಸುವ ಉದ್ದೇಶದಿಂದ, ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿದ ಅಂಚೆ ಅಧೀಕ್ಷಕರ ಕಾರ್ಯಾಲಯವು ೧೯೭೩ರಲ್ಲಿ ಮಂಡ್ಯದಲ್ಲಿ ಪ್ರಾರಂಭವಾಗಿದೆ. ಅವರ ನೆರವಿಗೆ ೧೮ ಜನ ಇತರ ಸಿಬ್ಬಂದಿ ಇದ್ದಾರೆ. ಮಂಡ್ಯ ಹಾಗೂ ಶ್ರೀರಂಗಪಟ್ಟಣದಲ್ಲಿ ಮುಖ್ಯ ಅಂಚೆ ಕಚೇರಿಗಳಿವೆ. ಕೇಂದ್ರ ಸರ್ಕಾರದ ಸೇವಾ ನಿಯಮಗಳು, ಅಂಚೆಯ ನಿಯಮಗಳು, ಕೈಪಿಡಿ ಮುಂತಾದ ನಿಯಮ, ಅಧಿನಿಯಮಗಳನ್ನು ಈ ಕಚೇರಿಯು ಅನ್ವಯಗೊಳಿಸುತ್ತಿದೆ. ಜಿಲ್ಲೆಯ ಎಲ್ಲ ೩೬೫ ಅಂಚೆ ಕಚೇರಿಗಳ ಉಸ್ತುವಾರಿಯ ಜೊತೆಗೆ ಅಂಚೆ ಆವಶ್ಯಕತೆ ಪೂರೈಸುವುದು, ವೆಸ್ಟರ್ನ್ ಯೂನಿಯನ್ ಮನಿ ಟ್ರಾನ್ಸ್‌ಫರ್ ಯೋಜನೆ, ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್, ಸಣ್ಣ ಉಳಿತಾಯ ಖಾತೆಯನ್ನು ತೆರೆಯಲು ಜನರಲ್ಲಿ ಆಸಕ್ತಿ ಮೂಡಿಸುವುದು, ವಿವಿಧ ಉಳಿತಾಯ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಈ ಕಚೇರಿಯ ಮುಖ್ಯ ಚಟುವಟಿಕೆಗಳಾಗಿವೆ. ಜಿಲ್ಲೆಯಲ್ಲಿ ಒಟ್ಟು ೩೦೫ ಇಲಾಖಾ ಹಾಗೂ ೭೦೮ ಇಲಾಖೇತರ ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ. ಶೀಘ್ರ ಅಂಚೆ ಸೇವೆ ಒದಗಿಸಲು ಗಣಕಯಂತ್ರದ ಉಪಯೋಗ, ಉಪಗ್ರಹದ ಮೂಲಕ ಹಣ ಕಳಿಸುವ (ಮನಿಯಾರ್ಡರ್) ವ್ಯವಸ್ಥೆಯ ಅನುಷ್ಠಾನ ಹಾಗೂ ಪಂಚಾಯತ್ ಸಂಚಾರ ಸೇವಾ ಕೇಂದ್ರಗಳ ಸ್ಥಾಪನೆ ಮುಂತಾದ ಯೋಜನೆಗಳನ್ನು ಈ ಕಚೇರಿಯು ಹಮ್ಮಿಕೊಂಡಿದೆ. ಪೋಸ್ಟ್‌ಮಾಸ್ಟರ್ ಜನರಲ್, ದಕ್ಷಿಣ ಕರ್ನಾಟಕ ವಲಯ, ಬೆಂಗಳೂರು ಅವರು ಇದರ ನಿಯಂತ್ರಣಾಧಿಕಾರಿಯಾಗಿರುತ್ತಾರೆ.

ಮೇಲೆ ವಿವೇಚಿಸಿದ ಇಲಾಖೆ, ಮಂಡಳಿ ಹಾಗೂ ನಿಗಮಗಳ ಹೊರತಾಗಿ ರಾಜ್ಯ ಸರ್ಕಾರದ ಇನ್ನೂ ಕೆಲವು ಇಲಾಖೆಗಳು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಅವುಗಳ ಪಟ್ಟಿ ಈ ಕೆಳಗಿನಂತಿದೆ:

ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ; ವಿಶೇಷ ಭೂಸ್ವಾಧೀನಾಧಿಕಾರಿಗಳು ; ಉಪನಿಬಂಧಕರು, ಸಹಕಾರ ಸಂಘಗಳ ಇಲಾಖೆ; ಜಿಲ್ಲಾ ಕಾರ್ಮಿಕ ಅಧಿಕಾರಿಗಳು, ಕಾರ್ಮಿಕ ಇಲಾಖೆ; ಜಿಲ್ಲಾ ಮಾರುಕಟ್ಟೆ ಅಧಿಕಾರಿಗಳು ; ಪ್ರೊಬೇಶನರಿ ಅಧಿಕಾರಿಗಳು; ರಿಮ್ಯಾಂಡ್ ಹೋಂ; ಸಹಾಯಕ ನಿರ್ದೇಶಕರು, ನಗರ ಯೋಜನಾ ಇಲಾಖೆ; ಸಹಾಯಕ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ; ಕಮಾಂಡೆಂಟ್, ಜಿಲ್ಲಾ ಗೃಹರಕ್ಷಕದಳ; ಅಧೀಕ್ಷಕರು, ಜಿಲ್ಲಾ ಕಾರಾಗೃಹ; ಕೇಂದ್ರ ಗುಪ್ತದಳದ ಸಹಾಯಕ ಅಧಿಕಾರಿ, ಕೇಂದ್ರ ಗುಪ್ತದಳ; ನಿರೀಕ್ಷಕರು, ಲೋಕಾಯುಕ್ತ ಇಲಾಖೆ; ಕಾರ್ಯಪಾಲ ಅಭಿಯಂತರರು ವಿಶ್ವೇಶ್ವರ ನಾಲಾ-೧ ಹಾಗೂ ೨ ವಿಭಾಗ; ಕಾರ್ಯಪಾಲ ಅಭಿಯಂತರರು ವಿಸಿ ನಾಲಾ (ಆಧುನೀಕರಣ); ಕಾರ್ಯನಿರ್ವಾಹಕ ಅಭಿಯಂತರರು, ದೂರ ಸಂಪರ್ಕ ಇಲಾಖೆ; ಉಪವಿಭಾಗೀಯ ಅಭಿಯಂತರರು (ಕೇಬಲ್ಸ್); ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ; ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ನಿರ್ಮಾಣ ನಿಗಮ ನಿಯಮಿತ; ಸಹಾಯಕ ಕಾರ್ಯಪಾಲ ಅಭಿಯಂತರರು, ಕರ್ನಾಟಕ ಅಭಿವೃದ್ಧಿ ಯೋಜನೆ ಉಪವಿಭಾಗ; ಕಾರ್ಯಪಾಲ ಅಭಿಯಂತರರು, ಜಿಲ್ಲಾ ಯೋಜನಾ ಮೇಲ್ವಿಚಾರಣಾ ಘಟಕ; ಕಾರ್ಯನಿರ್ವಾಹಕ ಅಭಿಯಂತರರು(ವಿ), ಕನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ವಿಭಾಗೀಯ ಕಚೇರಿ; ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಸರಬರಾಜು ಮಾರಾಟ ಸಂಘ ನಿಯಮಿತ; ಪ್ರಾಂಶುಪಾಲರು ಜಿಲ್ಲಾ ತರಬೇತಿ ಸಂಸ್ಥೆ; ಯುವಜನ ಸಮನ್ವಯಾಧಿಕಾರಿ, ನೆಹರು ಯುವಕ ಕೇಂದ್ರ; ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ; ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ನಿಗಮ; ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಕರ್ನಾಟಕ ಸಣ್ಣ ಕೈಗಾರಿಕಾ ಮಾರುಕಟ್ಟೆ ನಿಗಮ; ಕರ್ನಾಟಕ ಕೃಷಿ ಮಾರುಕಟ್ಟೆ ಮಂಡಳಿ, ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ ಹಾಗೂ ಕರ್ನಾಟಕ ರಾಜ್ಯ ಉಗ್ರಾಣ ನಿಗಮ.